ಇಲ್ಲದಿದ್ದರೆ ಈಗಲಾದರೂ ಮೂಲ ಕಾರಣ ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತೀರಾ?. ನಾನು ಸ್ಥಳದವನು ನಾನು ಸಲಹೆ ಕೊಡುತ್ತೇನೆ. ಅದರ ಪ್ರಕಾರ ಸರ್ಕಾರ ಕ್ರಮವನ್ನು ತೆಗೆದುಕೊಂಡು ಅಲ್ಲಿ ಇರಿಟೆಂಟ್ಸ್‌ಗೆ ಅವಕಾಶ ಕೂಡದೆ ಶಾಂತಿ ಖಾಯಂ ಆಗಿ ಉಳಿಯುವಂತೆ ಆಗುತ್ತದೆ. ರಸೂಲ್ ಖಾನ್ ಏನು ಸತ್ತಿದ್ದಾನೆ ಆತನು ಇನ್ನೂ ಚಿಕ್ಕ ವಯಸ್ಸಿನ ಹುಡುಗ. ತಾಯಿಯ ಸ್ಥಿತಿ ದಾರುಣ, ಚಿಂತಾಜನಕ ಸಾಕುತ್ತಿದ್ದ ಮಗ ಸತ್ತು ಹೋದ. ನೀವು ಕೊಟ್ಟಿರತಕ್ಕ ೫ ಸಾವಿರ ರೂಪಾಯಿಗಳು ಬಹಳ ಕಡಿಮೆ ಯಾಗುತ್ತದೆ. ಇನ್ನು ೧೦ ಸಾವಿರ ರೂಪಾಯಿಗಳನ್ನು ಕೊಟ್ಟು ಅವರ ಮನೆ ಅವರ ತಾಯಿಯ ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಕೇಳುತ್ತೇನೆ, ಸರ್ಕಾರ ಒಪ್ಪುತ್ತದೆ. ಕೊನೆಯ ದಾಗಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ಗುಂಪು, ಈ ಗುಂಪು ಎಂದು ಹೇಳಿ ಎರಡೂ ಕಡೆಯವರನ್ನು ಯಾರು ಚೇಷ್ಟೆ ಮಾಡುವವರು ಇರುತ್ತಾರೆ ಅವರನ್ನು ಹೊರಗೆ ಬಿಟ್ಟು ಸಂಪನ್ನರನ್ನು ಅರೆಸ್ಟ್ ಮಾಡುವುದರಿ ದ ಪರಿಹಾರ ಆಗುವುದಿಲ್ಲ. ಪೋಲೀಸಿನವರಿಗೆ ಯಾರು ಮಿಸ್ಚೀಫ್ ಎಂದು ಗೊತ್ತಿರುತ್ತದೆ. ಅಂತಹವರನ್ನು ಒಳಗೆ ಹಾಕದೆ ಬಿಟ್ಟು ಬಿಟ್ಟಿದ್ದೀರಿ. ಇದರಿಂದ ಅಪಾಯ ಇದೆ. ಒಟ್ಟಿನಲ್ಲಿ ಶಾಂತಿ ಕಾಯಂ ಆಗಿ ಉಳಿಯಲು ವ್ಯವಸ್ಥೆ ಮಾಡುವುದಕ್ಕೆ ತಾವು ಭರವಸೆ ಕೊಡುತ್ತೀರಾ?

ಶ್ರೀ ಎಂ. ವೀರಪ್ಪಮೊಯಿಲಿ,—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ಉಪನಾಯಕರು ಹೇಳಿದ ವಿಚಾರವನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ. ಈ ಘಟನೆಗೆ ಪ್ರಚೋದನೆಯಾಗಿರುವ ಬಗ್ಗೆ ವಿಚಾರ ಮಾಡಿ ವರದಿಯನ್ನು ಕಳುಹಿಸಬೇಕು, ಅಲ್ಲಿ ಪರಿಶೀಲನೆ ಮಾಡಬೇಕು, ಅಲ್ಲಿ ಶಾಂತಿ ಸಾಮ್ಯವಸ್ಥೆಯನ್ನು ಮಾಡಬೇಕೆಂದು ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಈಗ ತಾವು ಏನು ಹೇಳಿದ್ದೀರಿ, ಕೆಲವರು ಅನಾವಶ್ಯಕವಾಗಿ ಅರೆಸ್ಟ್ ಆಗಿದ್ದಾರೆಂದು ಹೇಳಿದ್ದೀರಿ ಅದನ್ನು ನಾವು ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತೇವೆ. ಇಂತಹ ಘಟನೆಗಳಲ್ಲಿ ಸಾಮಾನ್ಯವಾಗಿ ೫ ಸಾವಿರ ರೂಪಾಯಿ ಮುಖ್ಯ ಮಂತ್ರಿಗಳ ಪಂಡಾನಿಂದ ಕೊಡುವಂತಾದ್ದು ಇದೆ. ಎಲ್ಲಾ ಕೇಸುಗಳಲ್ಲಿಯೂ ಕೊಡುತ್ತಿದ್ದೇವೆ. ಆದರೆ ಈ ವಿಚಾರದಲ್ಲಿ ಕೆಲವು ಸದಸ್ಯರು ಸಲಹೆ ಕೊಟ್ಟಿದ್ದೀರಿ. ಈ ಘಟನೆಯ ಬಗ್ಗೆ ಯಾವರೀತಿಯಲ್ಲಿ ಶಾಂತಿ ಪಾಲನೆ ಮಾಡಲಿಕ್ಕೆ ಸಾಧ್ಯವಿದೆ ಎಂಬ ಬಗ್ಗೆ, ತಮ್ಮ ಸೂಚನೆ, ಸಲಹೆ ಇದ್ದರೆ ಮಾನ್ಯ ಉಪನಾಯಕರು ಕೊಡಬೇಕೆಂದು ನಾನು ಅವರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ

೩೧೨ನೇ ನಿಯಮದ ಮೇರೆಗೆ

ವಿಷಯ.—ಬೆಳಗಾವಿಯಲ್ಲಿನ ಅಲ್ಯೂಮಿನಿಯಂ ಕಾರ್ಖಾನೆಗೆ ಹೊಂದಿಕೊಂಡಂತೆ ಬಟ್ಟಿಗಿರಣಿಯೊಂದನ್ನು ಶ್ರೀ ಗೋಗಟೆಯವರು ಸ್ಥಾಪಿಸಿರುವುದರಿಂದ ಉದ್ಭವಿಸಿದ ಪರಿಣಾಮಗಳ ವಿಚಾರದ ಬಗ್ಗೆ ಚರ್ಚೆ ನಡೆಸುವುದು.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ನಿಯಮ ೩೧೨ರ ಪ್ರಕಾರ ಬೆಳಗಾವಿ ವಲಯದ ಹೊರ ವಲಯದಲ್ಲಿ ಅಲ್ಯೂಮಿನಿಯಮ್ ಕಾರ್ಖಾನೆ ಪಕ್ಕದಲ್ಲಿರತಕ್ಕ ಹೊನಗೆ ಗ್ರಾಮದಲ್ಲಿ ಶ್ರೀ ಗೋಗಟೆ ಎನ್ನತಕ್ಕ ವಾಣಿಜ್ಯೋದ್ಯಮಿಗಳಿಗೆ ಒಂದು ಬಟ್ಟೆ ಗಿರಣಿಯನ್ನು ಸ್ಥಾಪಿಸುವುದಕ್ಕೆ ೧೦೦ ಎಕರೆ ಅರಣ್ಯ ಭೂಮಿಯನ್ನು ಕೊಟ್ಟು ಅವರಿಗೆ ಇನ್ನಿತರೆ ರಕ್ಷಣೆ, ಪರವಾನಿಗೆ ಕೊಟ್ಟರುವುದರಿಂದ ಕರ್ನಾಟಕದ ಹಿತಕ್ಕೆ ಒದಗಬಹುದಾದಂಥ ಧಕ್ಕೆ ಬಗ್ಗೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಬೆಳಗಾವಿ ಪ್ರಮುಖವಾದಂಥ ನಗರ, ಮತ್ತು ಕರ್ನಾಟಕದ ಜನಮನದಲ್ಲಿ ಅದಕ್ಕೆ ಇರತಕ್ಕಂಥ ಸ್ಥಾನಮಾನ ಇದರ ಬಗ್ಗೆ ನಾನು ಮತ್ತೆ ವರ್ಣಿಸಬೇಕಾದ ಅಗತ್ಯವಿಲ್ಲ. ನಾವು ಈ ರಾಜ್ಯದ ಪುನರ್ ವಿಂಗಡಣೆಯ ಕಾಲದಿಂದಲೂ ಈ ಸಭೆಯಲ್ಲಿ ಪಕ್ಷ ಪಂಗಡಗಳ ಭೇದವಿಲ್ಲದೆ ನಾವು ಬೆಳಗಾವಿಯನ್ನು ನಮ್ಮ ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಬಗ್ಗೆ ಹೋರಾಟ ನಡೆಸಿಕೊಂಡು ಬಂದಿದ್ದೇವೆ. ನಾವು ಇನ್ನೊಂದು ಜಾಗವನ್ನು ಪಡೆಯುವುದಕ್ಕೆ ಹೋರಾಟ ಮಾಡಿಲ್ಲ. ನಮ್ಮಲ್ಲಿರತಕ್ಕದ್ದನ್ನು ನಾವು ಉಳಿಸಿಕೊಳ್ಳಲಿಕ್ಕೆ ಇದುವರೆಗೂ ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದು ಹೋರಾಟ ಮಾಡಿಕೊಂಡು ಬಂದಿದ್ದೇವೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಈ ಸದನಕ್ಕೆ ಒಂದು ಆಶ್ವಾಸನೆ ಕೊಟ್ಟರು. ಹಿಂದೆ ಇದ್ದಂಥ ನಿರ್ಣಯಕ್ಕೆ ಸರ್ಕಾರ ಬದ್ಧವಾಗಿದೆ ನಾವೆಲ್ಲರೂ

ಬದ್ಧವಾಗಿದ್ದೇವೆ ಆದನ್ನು ಬದಲಾವಣೆಯನ್ನು ಮಾಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದ್ದಾರೆ. ಆನಂತರ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಪತ್ರಿಕೆಗಳಲ್ಲಿ ಕೊಟ್ಟುಕರ್ನಾಟಕದ ನಿಲುವು ಸಡಿಲವಾಗಿದೆ ಎಂದು ಹೇಳಿದ್ದಾರೆ. ನಾನು ಆಪಾದನೆ ರೀತಿಯಲ್ಲಿ ಹೇಳುವುದಲ್ಲ, ಅದರಲ್ಲಿ ಆಸಕ್ತಿ ಜನಗಳು ಆ ರೀತಿ ಬರೆಸಿರುತ್ತಾರೆ. ಮಾನ್ಯ ಮುಖ್ಯಿ ಮಂತ್ರಿಗಳು ಬಹಳ ಗಂಭೀರವಾದ ರೀತಿಯಲ್ಲಿ ಆಶ್ವಾಸನೆ ಕೊಟ್ಟಿರುವುದರಿಂದ ಆ ವರದಿಯ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ಬೆಳಗಾವಿ ಪ್ರಶ್ನೆ ಎಲ್ಲಿಯವರೆಗೆ ಈ ರೀತಿ ಬೇರೆಯವರು, ಪದೇ ಪದೇ ಎತ್ತಿ, ಒಂದಲ್ಲ ಒಂದು ಸಮಯ ಹೊಂಚಿ ಇದನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎನ್ನುವ ಪ್ರಯತ್ನ ಇದೆ ಅಲ್ಲಿಯವರೆಗೂ ಕೂಡ ನಾವು ಜಾಗರೂಕರಾಗಬೇಕಾದ್ದು ಬಹಳ ಅಗತ್ಯ ಇದೆ. ಅಧ್ಯಕ್ಷರೆ, ನನಗೆ ಮಾನ್ಯ ಗೋಗಟೆಯವರ ಬಗ್ಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಅವರ ಬಗ್ಗೆ ಅನಾವಶ್ಯಕವಾಗಿ ಅನೌದಾರ್ಯದ ಮಾತು ಗಳನ್ನು ಹೇಳುವ ಅಗತ್ಯವಿಲ್ಲ. ಕರ್ನಾಟಕದ ಹಿತಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಬಿಡಿಸಲಿಕ್ಕೆ ಬಾರದೇ ಇದ್ದ ರೀತಿಯಲ್ಲಿ ಹೊಂದಿಕೊಂಡಿರುವುದರಿಂದ ಆದನ್ನು ಹೇಳಲೇ ಬೇಕಾಗುತ್ತದೆ. ಇವೊತ್ತು ನಮ್ಮ ಗಮನಕ್ಕೆ ಬಂದಿರತಕ್ಕ ವಿಚಾರ ಎಂದರೆ ಮಾನ್ಯ ಗೋಗಟೆಯವರು ಮಹಾರಾಷ್ಟ್ರದ ಪರವಾಗಿ ಇರತಕ್ಕಂತಹ ವ್ಯಕ್ತಿ. ಅವರು ಕರ್ನಾಟಕದ ಗಡಿ ಸಮೀಪದ ಭಾಗದಲ್ಲಿದ್ದು ಅಲ್ಲಲ್ಲಾ ಮಹಾರಾಷ್ಟ್ರ ವಾದಿ ಚಟುವಟಿಕೆಗಳಿಗೆ, ಪಾಲನೆ, ಪೋಷಣೆ, ಬೆಂಬಲ, ಇವುಗಳನ್ನೆಲ್ಲಾ ಒದಗಿಸಿಕೊಂಡು ಬಂದಿರತಕ್ಕ ವ್ಯಕ್ತಿ. ಅವರ ಜನ ಬಂದು ಮರಾಠಿಯಲ್ಲಿ ಕೇಳಿರಬಹುದು ಕೊಟ್ಟಿರಬೇಕು. ರಾಜಕೀಯವಾಗಿ ಸಂದರ್ಭ ಒದಗಿದಾಗ ಪೋಷಣೆ ಮಾಡಿಕೊಂಡು ಬಂದಿದ್ದಾರೆ. ಇದರ ಬಗ್ಗೆ ಪರಿಪೂರ್ಣವಾದ ಮಾಹಿತಿ ಸರ್ಕಾರದಲ್ಲಿದೆ. ಇದು ಹೊಸದೇನು ಅಲ್ಲ. ಯಾರು ಯಾರು ಚಟುವಟಿಕೆ ಮಾಡುತ್ತಿದ್ದಾರೆ, ಎಲ್ಲೆಲ್ಲಿ ಬೆಂಬಲ ಇದೆ, ಸರ್ಕಾರದಲ್ಲಿ ಅವರ ದಾಖಲೆಗಳೆಲ್ಲಾ ಇದೆ. ಆ ವ್ಯಕ್ತಿಗೆ ಪೊದಲು ಪಕ್ಕದ ಗ್ರಾಮ ಮಾಚೆ ಎಂಬಲ್ಲಿ ೯೦ ಎಕರೆ ಜಮೀನು ಕೊಟ್ಟಿದ್ದರು. ಅದು ಅರಣ್ಯ ಭೂಮಿ ಅಲ್ಲ. ಆನಂತರ ಅವರ ಕೇಳಿಕೆ ಮೇಲೆ ೧೦೦ ಎಕರೆ ಅರಣ್ಯ ಭೂಮಿಯನ್ನು ಅರಣ್ಯ ಅಲ್ಲ ಎಂದು ಮಹಜರ್ ಮಾಡಿ ಕೊಟ್ಟ ದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ, ನಮ್ಮಲ್ಲಿ ಭೂ ಹಂಚಿಕೆ ಕ್ರಮದಲ್ಲಿ ಅರ್ಧ ಎಕರೆ, ಕಾಲು ಎಕರೆ ಅರಣ್ಯದ ಒತ್ತುವರಿಯನ್ನು ಕ್ರಮಗೊಳಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರ ದವರು ಅರಣ್ಯ ಭೂಮಿಯ ಬಗ್ಗೆ ಕಾನೂನು ಮಾಡಿದ್ದಾರೆ. ನಮಗೆ ಇಲ್ಲಿ ಅರ್ಧ ಎಕರೆ ಭೂಮಿಯನ್ನು ಕೊಡಿಸಲಿಕ್ಕೆ ಆಗುವುದಿಲ್ಲ ಈ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದಿಂದ ೧೨೦ ಎಕರೆಗೆ ಪರವಾನಿ ತರಿಸಿ ಇವರಿಗೆ ಗ್ರಾಂಟ್ ಮಾಡಿ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಗಿರಣಿ ಮಾಡಲಿಕ್ಕೆ ೧೦೦ ಎಕರೆ ಜಮೀನು ಏತಕ್ಕೆ ಬೇಕು ಎನ್ನುವ ಪ್ರಶ್ನೆ ಬರುತ್ತದೆ. ಅವರ ಪ್ರಕಾರವೇ ೧೫೦೦ ಜನರನ್ನು ನೇಮಿಸಿ ಕೊಳ್ಳತಕ್ಕಂಥಾದ್ದಕ್ಕೆ ೧೦೦ ಎಕರೆ ಜಮೀನು ಏತಕ್ಕೆ ಬೇಕು ಎನ್ನುವುದು ಅನುಮಾನಕ್ಕೆ ಆಸ್ಪದವಾಗಿದೆ. ೧೦೦ ಎಕರೆಯಲ್ಲಿ ಅವರ ಚಕ್ರಾಧಿಪತ್ಯ ಸ್ಥಾಪನೆ ಮಾಡಬೇಕೆಂದು ಅವರ ವಾದ ಇದೆ. ನಾನಾ ತರಹ ವಾದ ಮಾಡುತ್ತಾರೆ. ನಾವು ಅಲ್ಲಿ ಗೆದ್ದುಬರತಕ್ಕ ಕಾರಣದಿಂದ ಇಲ್ಲಿ ಜನರ ಅಭಿಮತ ಇದೆ, ಆ ಕಡೆಗೆ ಸೇರಿಸಬೇಕು ಎಂದು ವಾದ ಮಾಡುತ್ತಾರೆ. ಇಲ್ಲಿ ಜನಸಂಖ್ಯೆ ಜಾಸ್ತಿ ಇದೆ ಎಂದು ವಾದ ಮಾಡುತ್ತಾರೆ. ನಾನಾ ರೀತಿ ವಾದ ಇಟ್ಟಿದ್ದಾರೆ. ಒಟ್ಟಿನಲ್ಲಿ ಮಹಾರಾಷ್ಟ್ರದ ಪರವಾಗಿ ಇರತಕ್ಕ ವ್ಯಕ್ತಿಗಳು. ಅವರ ಸಂಖ್ಯೆ ಜಾಸ್ತಿಯಾಗುತ್ತದೆ ಎನ್ನುವುದು ಆಷ್ಟೇ ಅಲ್ಲ, ಆರ್ಥಿಕವಾದಂಥ ಶಕ್ತಿ ಆ ಉದ್ದೇಶ ಇರತಕ್ಕವರ ಕೈಯ ಲ್ಲಿ ಕನ್ನಡಿಗರು, ಪಾಪ ಪರದೇಶಿಗಳಾಗಿ ಅವರ ಪ್ರಭಾವ ವಲಯಕ್ಕೆ ಸಿಕ್ಕುತ್ತಾರೆ. ನಾಳೆ ಒಂದು ಸನ್ನಿವೇಶದಲ್ಲಿ ಚುನಾವಣೆಗೆ ಹೋಗಬೇಡಿ ಎಂದು ಆರ್ಥಿಕ ಶಕ್ತಿಯನ್ನು ಉಪಯೋಗಿಸುವುದು ಬರು ತ್ತದೆ. ನಮ್ಮ ನೆಲದಲ್ಲಿ ಅವರಿಗೆ ಪ್ರೋತ್ಸಾಹ ಕೊಟ್ಟು, ಅವಕಾಶ ಕಲ್ಪಿಸಿಕೊಟ್ಟರೆ, ನಾಳೆ ದಿವಸ ಮಹಾರಾಷ್ಟ್ರಕ್ಕೆ ಬೆಳಗಾವಿ ಸೇರಿಸುವುದಕ್ಕೆ ಪರಿಪೂರ್ಣವಾದ ಆಶೀರ್ವಾದ ಕೊಟ್ಟಂತಾಗುತ್ತದೆ. ಈ ದಿಸೆಯಲ್ಲಿ ಗಿರಣಿ ವಿಚಾರ ಬರಬಹುದು. ಇವೊತ್ತು ವಾಣಿಜ್ಯೋದ್ಯಮಕ್ಕೆ ಕೊಡಿ, ಕರ್ನಾಟಕದಲ್ಲಿ ಕೈಗಾರಿಕೆ ಮಾಡಬೇಕೆಂದು ಇದ್ದರೆ, ಬಟ್ಟೆ ಗಿರಣಿ ಮಾಡಬೇಕು ಎಂದು ಇದ್ದರೆ, ಆಲ್ಯೂಮಿನಿಯಮ್ ಫ್ಯಾಕ್ಟರಿ ಪಕ್ಕದಲ್ಲಿಯೇ ಬೇಡ, ಒಳನಾಡಿನಲ್ಲಿ ಮಾಡಲಿಕ್ಕೆ ಕೊಡಿ. ಅಲ್ಲಿ ಕೊಟ್ಟಿರುವ ಉದ್ದೇಶ ಏನು ಎಂದರೆ, ಹಿಂದೆ ಬ್ರಿಟೀಷರ ಕಾಲದಲ್ಲಿ ರಾಜಮಹಾರಾಜರು ರಾಜ್ಯಕ್ಕೆ ಒಬ್ಬ ಪ್ರೆಸಿಡೆಂಟ್‌ರನ್ನು ಇಡು ತ್ತಿದ್ದರು. ಈಗ ಅಲ್ಲಿ ಇವರನ್ನು ಮಹಾರಾಷ್ಟ್ರದ ಗಡಿ ರೆಸಿಡೆಂಟ್ ಇದ್ದ ಹಾಗೆ ಮಾಡುತ್ತಾರೆ. ಈ ರೆಸಿಡೆಂಟ್ ಕೇಳಿಕೊಂಡು ಬೇರೆಯವರು ಜೀವನ ಮಾಡುವ ಪರಿಸ್ಥಿತಿ ಬರಬಹುದು ಎಂದು ನಾನು ಶತ ಕಾಲದ ಕಲ್ಪನೆಯಿಂದ ಹೇಳತಕ್ಕ ಮಾತಲ್ಲ. ಕರ್ನಾಟಕದ ಎಲ್ಲ ಜನರ ಮನಸ್ಸನ್ನು ಕೆರಳಿಸಿರತಕ್ಕದ್ದು ವಿಶೇಷವಾಗಿ ಬೆಳಗಾವಿ ಜಿಲ್ಲೆ. ಇಡೀ ಜೀವಂತ ದುಡಿದವರು ಬೆಳಗಾವಿ ಭಾಗದಲ್ಲಿದ್ದಾರೆ. ಅವರೆಲ್ಲಾ

ಇದರ ಬಗ್ಗೆ ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಿರತಕ್ಕ ಅಂದರೆ ಸ್ಥಳೀಯ ಮಟ್ಟದಲ್ಲಿರತಕ್ಕ, ಜಿಲ್ಲಾ ಮಟ್ಟದಲ್ಲಿರತಕ್ಕ, ರಾಜ್ಯಮಟ್ಟದಲ್ಲಿರತಕ್ಕ ಪತ್ರಿಕೆಗಳು ಇದರ ಬಗ್ಗೆ ಸುದೀರ್ಘವಾಗಿ ಬರೆದು ಇದೊಂದು ಅಪಾಯಕಾರಿ ಕೆಲಸವೆಂದು ನಮಗೆ ತಿಳಿಸಿವೆ. ಇಂಥ ಸಂದರ್ಭದಲ್ಲಿ ಈ ಸದನವನ್ನು ಇಷ್ಟೊಂದು ಲಘುವಾಗಿ ಎಣಿಸುವುದು ಸರಿಯಲ್ಲ. ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂ. ಪ. ನಾಗರಾಜಯ್ಯನವರು ಬೇಜವಾಬ್ದಾರಿಯುತವಾದ ಆಪಾದನೆಗಳನ್ನು ಮಾಡಿದ್ದಾರೆ. ಮೊನ್ನೆ ಚಿಕ್ಕಮಗಳೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡುತ್ತಾ ಏನು ಅಪ್ಪಣೆ ಕೊಡಿಸಿದ್ದಾರೆಂದರೆ ಪ್ರಲೋಭನೆ ತೋರಿಸಿದರೆ ಸಾಕು ಕರ್ನಾಟಕ ರಾಜ್ಯವನ್ನೇ ಬ್ಯಾಂಕ್ ಚೆಕ್ ಮೂಲಕ ಕೊಡುವುದಕ್ಕೆ ಇವರು ಸಿದ್ಧವಾಗಿದ್ದಾರೆಂದು ಹೇಳಿದ್ದಾರೆ. ಇಂಥ ಬೇಜವಾಬ್ದಾರಿಯುತವಾದ ಹೇಳಿಕೆಯನ್ನು ಅವರು ನೀಡಬಾರದು. ಕಳೆದ ೨೫ ವರ್ಷಗಳಿಂದಲೂ ಕನ್ನಡಕ್ಕಾಗಿ, ಕನ್ನಡಿಗರಿಗಾಗಿ, ಕನ್ನಡದ ಗಡಿಯ ಭಾಗಗಳಿಗಾಗಿ ನಾವುಗಳೂ, ಸರ್ಕಾರದವರೂ ಹೋರಾಟಮಾಡುತ್ತಿರುವುದು ಇವರಿಗೆ ಚೆನ್ನಾಗಿ ಗೊತ್ತಿದೆ. ೧೯೬೭ರಲ್ಲಿ ಮತ್ತು ಅದಕ್ಕೂ ಮುಂಚಿತವಾಗಿ ನಾವು ನಮ್ಮ ಪಾಲಿನ ಕರ್ತವ್ಯವನ್ನು ಮಾಡಿದ್ದೇವೆ. ನಾವು ಕನ್ನಡನಾಡಿನ ಗಡಿ ಬಗ್ಗೆ ಶ್ರಮಪಟ್ಟು ಹೋರಾಟ ಮಾಡಿದ್ದೇವೆ. ಇಷ್ಟೆಲ್ಲಾ ಶ್ರಮಪಟ್ಟರೂ ಈ ವಿಚಾರದಲ್ಲಿ ನಾವು ಹರಾಜಾಗಬೇಕಾದರೆ ನಾವು ಯೋಚನೆಮಾಡಲೇ ಬೇಕಾಗುತ್ತದೆ. ಇದು ಪಕ್ಷ ಪಂಗಡಗಳ ಪ್ರಶ್ನೆ ಅಲ್ಲವೆಂದು ನಾವು ಮೊದಲನೆಯದಾಗಿ ತೀರ್ಮಾನ ಮಾಡಿದ್ದೇವೆ. ಸರ್ಕಾರ ಇದರ ಬಗ್ಗೆ ಏನೊಂದು ನಿಲುವನ್ನು ತೆಗೆದುಕೊಂಡಿದೆ ಅದು ಖಂಡಿತವಾಗಿಯೂ ವಿಷಾದನೀಯ. ನಾನು ಹೇಳಬೇಕಾದುದನ್ನೆಲ್ಲಾ ಅವರು ಒಂದೇ ಮಾತಿನಲ್ಲಿ ಹೇಳಿ ಹಾರಿಸಿಬಿಟ್ಟಿದ್ದಾರೆ.

> "I am aware that representations have been received expressing apprehensions that the setting up of this unit would not materially benefit the people of our own State." This is not the apprehension.

ಅಂದರೆ ಅಲ್ಲಿ ಗಿರಣಿಯನ್ನು ಸ್ಥಾಪನೆ ಮಾಡುವುದರಿಂದ ಕರ್ನಾಟಕಕ್ಕೆ ಏನೂ ಸಹಾಯವಾಗುವುದಿಲ್ಲವೆಂದು ಕೆಲವರು ತಿಳಿಸಿದ್ದೂ ಉಂಟು. ಆಷ್ಟೇ ಅಲ್ಲ, ಬೆಳಗಾಂನ್ನು ಮಹಾರಾಷ್ಟ್ರದವರಿಗೆ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ ಮತ್ತು ಕರ್ನಾಟಕದ ಹಿತಕ್ಕೆ ಧಕ್ಕೆಯುಂಟಾಗುತ್ತದೆಂದು ಅನೇಕ ಜನರು ಮನವಿಗಳನ್ನು ಅರ್ಪಿಸಿದ್ದಾರೆ. ನನ್ನ ತಿಳುವಳಿಕೆಗೆ ಬಂದ ಪ್ರಕಾರ ಮಾನ್ಯ ಸದಸ್ಯರಾದ ತಕ್ಕೇದ್‌ರವರು ಈ ಗಡಿ ಹೋರಾಟಗಾರರು. ಅವರೂ ಮತ್ತು ಅಲ್ಲಿರತಕ್ಕ ಎಲ್ಲ ಶಾಸಕರೂ ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದಾರೆ. ಕಳೆದಸಾರಿ ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಕ್ಕೆ ತಡೆ ಹಾಕಿದ್ದರು. ಆ ಅಧಿವೇಶನ ಮುಕ್ತ್ಯವಾಗಿ ಮತ್ತೆ ನಾವು ಸಭೆ ಸೇರುವುದರೊಳಗೆ ಈ ತಡೆಯಾಜ್ಞೆಯನ್ನು ತೆಗೆದು ಹಾಕಿ ತಮಗೆ ಏನೇನು ಬೇಕೋ ಅದನ್ನೆಲ್ಲಾ ಮಾಡಿದ್ದಾರೆ.

ನೆವಂಗೆ ನಮ್ಮ ಮಂತ್ರಿಗಳೂ ಹೇಳಲಿಲ್ಲ. ಸದಸ್ಯರೂ ಕೂಡ ಹೇಳಲಿಲ್ಲ. ಈ ಗಿರಣಿಯನ್ನು ಅವರು ಸ್ಥಾಪನೆ ಮಾಡುವುದರಿಂದ ನಮಗೆ ಏನೂ ಅನುಕೂಲವಾಗುವುದಿಲ್ಲ. ಆ ಸ್ಥಳದಲ್ಲಿ ಕನ್ನಡ ಮಾತನಾಡತಕ್ಕ ಜನರು ಸ್ವಲ್ಪ ಮಂದಿ ಇದ್ದಾರೆ. ಅವರಿಗೆ ಸ್ಕಿಲ್ಡ್, ಸೆಮಿ ಸ್ಕಿಲ್ಡ್, ಅಥವಾ ನಾನ್ ಸ್ಕಿಲ್ಡ್ ಕೆಲಸಗಳನ್ನು ಕೊಡಬಹುದು. ಆದರೆ ಈ ಕೆಲಸಕ್ಕೆ ನಾವು ಸಮಾಧಾನ ಪಟ್ಟುಕೊಳ್ಳಬೇಕಾದರೆ ಬೇರೆ ದೃಷ್ಟಿಯಿಂದಲೂ ನೋಡಬೇಕಾಗಿದೆ. ಗೋಗಟೆಯವರ ಇತಿಹಾಸವನ್ನು ಎದುರಿನಲ್ಲಿ ಇಟ್ಟುಕೊಂಡು ಈ ಪ್ರಶ್ನೆಯನ್ನು ಜ್ವಲಂತವಾಗಿ ಉಳಿಸಿಕೊಂಡು ಬರಬೇಕೆಂದು ಹೇಳುವ ವ್ಯಕ್ತಿಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿ ಕರ್ನಾಟಕವನ್ನು ಉಳಿಸಿಕೊಳ್ಳುವ ರೀತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಗೋಗಟೆಯವರನ್ನು ಮಹಾರಾಷ್ಟ್ರದ ರೆಸಿಡೆಂಟ್ ಆಗಿ ಕೆಲಸಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವುದು ನಿಜಕ್ಕೂ ವಿಷಾದನೀಯವಾದುದು. ಜನಗಳು ಕೊಟ್ಟಿರತಕ್ಕ ಮನವಿಯನ್ನು ಸರಿಯಾಗಿ ಪರಿಶೀಲಿಸದೆ ಕೇವಲ ವಾಣಿಜ್ಯೋದ್ಯಮಿಗಳ ಮನವೊಲಿಸಿಕೊಳ್ಳಲು ಮಾಡಿರತಕ್ಕ ಕೆಲಸ ಇದು ಎಂದು ನಮ್ಮ ಸರ್ಕಾರದ ಮೇಲೆ ನಾನು ಸ್ಪಷ್ಟವಾದ ಆಪಾದನೆಯನ್ನು ಮಾಡಬೇಕಾಗುತ್ತದೆ. ಈ ವಿಚಾರದ ಬಗ್ಗೆ ನಮ್ಮ ಸರ್ಕಾರ ತೀವ್ರ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬಹುಶಃ ಬೆಳಗಾಂಗೆ ಆಷ್ಟೇ ಅಲ್ಲ ಇಡೀ ಕರ್ನಾಟಕ ರಾಜ್ಯಕ್ಕೇ ಒಂದು ದೊಡ್ಡ ಅನ್ಯಾಯವನ್ನು ಮಾಡಿದಂತಾಗುತ್ತದೆಂದು ಹೇಳಲಿಕ್ಕೆ ಇಷ್ಟೆಪಡುತ್ತೇನೆ. ಮತ್ತು ಇದನ್ನು

ಕೊಟ್ಟಿರತಕ್ಕ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಪ್ಪಿಸಿಕೊಳ್ಳುವುದಕ್ಕೆ ಮಾಡಿರುವ ಒಂದು ತಂತ್ರವೆಂದೂ ಘೋಷಣೆಯಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಆರ್. ಎಸ್ ಪಾಟೀಲ್ (ರಾಮದುರ್ಗ).—ಮಾನ್ಯ ಉಪಾಧ್ಯಕ್ಷರೇ, ಈ ವಿಷಯವನ್ನು ನಾನು ಬಹಳ ವಿಷಾದದಿಂದ ಪ್ರಸ್ತಾಪ ಮಾಡಬೇಕಾಗುತ್ತದೆ. 'ಕನ್ನಡ ನಾಡಿನಲ್ಲಿರತಕ್ಕ ಕನ್ನಡಿಗರ ಹಿತರಕ್ಷಣೆಯನ್ನು ಮಾಡತಕ್ಕ ಕರ್ತವ್ಯ ನಮ್ಮ ಸರ್ಕಾರಕ್ಕೆ ಸೇರಿದ್ದು,' ಕನ್ನಡದ ನೆಲ ಮತ್ತು ಜಲದ ಬಗ್ಗೆ ತುಂಬಾ ಅಭಿಮಾನವನ್ನು ಹೊಂದಿರತಕ್ಕ ಸರ್ಕಾರ ನಮ್ಮದು. ಕಾಸರಗೋಡು ಮತ್ತು ಬೆಳಗಾಂನ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಗುಂಡೂರಾಯರು ಬಹಳ ಘಟ್ಟಿಯಾಗಿ ಮಾತನಾಡಿದ್ದಾರೆ. ಆದರೆ ಇಲ್ಲಿ ನಡೆದುಹೋಗಿರತಕ್ಕ ಘಟನೆಯನ್ನು ನೆನೆಸಿಕೊಂಡರೆ ಬೆಳಗಾಂಗೆ ಬೆಂಕಿ ಬಿದ್ದು ಹೋಗಿದೆ. ಬೆಳಗಾಂನ ಜನರ ಹಿತರಕ್ಷಣೆ ಜಾಗರೂಕತೆಯಿಂದ ಆಗಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ್‌ರವರು ಬಹಳವಾಗಿ ಹೇಳಿದ್ದಾರೆ. ಕನ್ನಡ ನಾಡಿನ ಗಡಿ ಪ್ರದೇಶದ ಬಗ್ಗೆ ನಮಗೆ ಬಹಳ ಅಭಿಮಾನ ಇದೆ. ಕನ್ನಡ ನಾಡಿನ ಒಂದು ಇಂಚು ಜಾಗವನ್ನೂ ಬೇರೆಯವರಿಗೆ ಬಿಟ್ಟು ಕೊಡುವುದಿಲ್ಲವೆಂದು ಘೋಷಣೆ ಕೂಗಿದ್ದೇವೆ, ಆ ಗಡಿಯಲ್ಲಿ ಇರತಕ್ಕ ನಾವುಗಳು ಪ್ರತಿದಿನ ಮಹಾರಾಷ್ಟ್ರದವರಿಂದ ಕಿರುಕುಳವನ್ನು ಅನುಭವಿಸುತ್ತಿದ್ದೇವೆ. ಆದರೆ ನಿಮಗೆ ಯಾರಿಗೂ ಈ ಒಂದು ಕಿರುಕುಳ ಇಲ್ಲ. ಈ ಸಭೆಯಲ್ಲಿರುವವರ ಪೈಕಿ ಮಾನ್ಯ ಜಕನೂರುರವರನ್ನು ಬಿಟ್ಟರೆ ಬೇರೆಯವರಿಗೆ ಇದರ ಅನುಭವ ಇಲ್ಲ. ಆ ಗೋಗಟೆಯವರ ವಿಚಾರ ನಿಮಗೆ ಯಾರಿಗೂ ಸರಿಯಾಗಿ ಗೊತ್ತಿಲ್ಲ. ಅವರು ಸಾಮಾನ್ಯ ವ್ಯಕ್ತಿಯಲ್ಲ. ಅವರಿಗೆ ಹಣದ ಬಲ, ಜನದ ಬಲ ಎರಡೂ ಇದೆ. ನಮ್ಮ ಸರ್ಕಾರದವರು ಆ ಭಾಗದಲ್ಲಿ ಮಾಡತಕ್ಕ ಪ್ರತಿಯೊಂದು ಕೆಲಸಕ್ಕೂ ಅವರು ಅಡ್ಡಗಾಲು ಹಾಕುತ್ತಾ ಬಂದಿದ್ದಾರೆ. ಇಂಥ ವ್ಯಕ್ತಿಗೆ ಬೆಳಗಾಂನಿಂದ ೧೦ ಕಿಲೋ ಮೀಟರ್ ದೂರದಲ್ಲಿ ೧೮೦ ಎಕರೆ ಜಮೀನನ್ನು ಕೊಟ್ಟರೆ, ಅದರಿಂದ ನಮ್ಮ ರಾಜ್ಯದ ಆರ್ಥಿಕಾಭಿವೃದ್ಧಿ ಯಾಗುತ್ತದೆ, ನಮ್ಮ ಕನ್ನಡನಾಡಿನ ಕನ್ನಡಿಗರಿಗೆ ಉದ್ಯೋಗ ಸಿಕ್ಕುತ್ತದೆಂದು ಹೇಳುತ್ತಿದ್ದೀರಿ' ಸ್ವಾಮಿ, ನಾನಾದರೂ ಹೇಳುತ್ತೇನೆ, ತಾವು ಅಂದುಕೊಂಡಿರುವಂತೆ ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ ಕನ್ನಡಿಗರ ಉದ್ಯೋಗದ ದೃಷ್ಟಿಯಿಂದ ಇದು ಒಳ್ಳೆಯದು ಎಂದು ನಾವು ಇಟ್ಟುಕೊಳ್ಳೋಣ. ಆದರೆ ಈಗ ಬೆಳಗಾಂನಲ್ಲಿರತಕ್ಕ ಅಲ್ಯೂಮಿನಿಯಂ ಫ್ಯಾಕ್ಟರಿಯಲ್ಲಿ ಏನೇನು ನಡೆಯುತ್ತಿದೆ, ಆದರಿಂದ ನಮ್ಮ ಕನ್ನಡಿಗರಿಗೆ ಎಷ್ಟುಮಟ್ಟಿನ ಉಪಯೋಗವಾಗುತ್ತಿದೆ ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ, ನೋಡುತ್ತಿದ್ದೇವೆ. ಅಲ್ಲಿಯ ಕನ್ನಡಿಗರ ಗೋಳಿನ ಕತೆಯನ್ನು ಪ್ರತಿದಿನ ಕಾಣುತ್ತಿದ್ದೇವೆ. ಇಷ್ಟೆಲ್ಲಾ ನೋಡಿದ್ದರೂ ಈಗ ಇನ್ನೊಂದು ಫ್ಯಾಕ್ಟರಿಯನ್ನು ಕೊಟ್ಟರೆ ಅಲ್ಲಿ ನಮ್ಮ ಕನ್ನಡಿಗರಿಗೆ ಅನುಕೂಲವಾಗುತ್ತದೆ ಎಂದು ತಾವು ಹೇಳುವುದಾದರೆ ಇದು ವಿಷಾದಕರ ಸಂಗತಿ. ಇಲ್ಲಿ ಅರಣ್ಯ ಇಲಾಖೆಗೆ ಸೇರಿದ ೧೦೦ ಎಕರೆ ಜಮೀನನ್ನು ಅವರಿಗೆ ಕೊಡಲಾಗಿದೆ ಎಂದರೆ ಇದರಲ್ಲಿ ಅನುಮಾನ ಬರುತ್ತದೆ. ಏಕೆಂದರೆ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನ ಅಧೀನದಲ್ಲಿರತಕ್ಕ ಜಮೀನನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿ ಅನಂತರ ಅದನ್ನು ಗೋಗಟೆಯವರಿಗೆ ಕೊಡತಕ್ಕ ಕೆಲಸವನ್ನು ಏತಕ್ಕೆ ಮಾಡಬೇಕಾಗಿತ್ತು ? ಅದರಲ್ಲೂ ಈ ಕೆಲಸವನ್ನು ಬಹಳ ಅವಸರದಲ್ಲಿ ಮಾಡಿದ್ದಾರೆಂದರೆ ಆಶ್ಚರ್ಯಕರ ಸಂಗತಿ. ಇವತ್ತು ಆ ವ್ಯಕ್ತಿ ಏನು ಹೇಳುತ್ತಾನೆಂದರೆ ಒಂದು ಎಕರೆಗೆ ೪ ಸಾವಿರ ರೂಪಾಯಿ ಆದರೂ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್‌ನವರು ಇದಕ್ಕೆ ಒಪ್ಪಿಕೊಂಡಿಲ್ಲ. ತಾ : ೧೨-೧೦-೧೯೮೧ ರಂದು ಕೆ.ಐ.ಎ.ಡಿ.ಬಿ. ಯವರಿಂದ ಅರಣ್ಯ ಇಲಾಖೆಗೆ ಆ ಜಮೀನನ್ನು ವರ್ಗಾಯಿಸಿದ ಒಂದೆರಡು ದಿವಸದಲ್ಲಿಯೇ ಈ ಗೋಗಟೆಯವರು ಆ ಸ್ಥಳದಲ್ಲಿ ಹೋಗಿ ಒಂದು ಬೋರ್ಡ್ ಹಾಕಿ ಕೆಲಸಮಾಡುತ್ತಿದ್ದಾರೆ. ಅವರಿಗೆ ಆ ಜಾಗವನ್ನು ಕೊಟ್ಟಿದ್ದಾದರೂ ಯಾವಾಗ? ಅಷ್ಟು ಬೇಗ ಅವರು ಅಲ್ಲಿ ಹೇಗೆ ಬೋರ್ಡ್ ತಗುಲಿಹಾಕಿದರು ? ಕನ್ನಡಿಗರಿಗೆ ಅಲ್ಲಿ ಅನ್ಯಾಯ ನಡೆದಿದೆ. ಇದರ ಬಗ್ಗೆ ಆನ್ನು, ವಾಲಿ, ಚಿಕ್ಕೋಡಿ, ಇನ್ನೂ ಮುಂತಾದವರು ಪ್ರತಿಭಟನೆಯನ್ನು ವ್ಯಕ್ತ ಮಾಡಿದಾಗ ೧೦ ಜನರು ಸೇರಿ ಸರ್ಕಾರಕ್ಕೆ ಒಂದು ಮನವಿಯನ್ನು ಕೊಟ್ಟಾಗ ಸರ್ಕಾರದಿಂದ ಅವರಿಗೆ ತಡೆಯಾಜ್ಞೆ ಹೋಗಿದೆ.

೪-೦೦ ಪಿ. ಎಂ.

ಅವರಿಗೆ ಇಷ್ಟೊಂದು ಅವಸರವಾಗಿ ಏತಕ್ಕೆ ಭೂಮಿಯನ್ನು ಕೊಡುವುದಕ್ಕೆ ಕನ್ನಡಿಗರು ಹೊರಟಿದ್ದಾರೋ ನನಗಂತೂ ತಿಳಿಯುತ್ತಿಲ್ಲ. ಕನ್ನಡನಾಡಿನ ಜನರೆ ಜೋತುಬಿದ್ದು, ಕನ್ನಡ ನಾಡಿನ ಹಿತವನ್ನೇ ಮರೆತು ಆತನಿಗೆ ಫ್ಯಾಕ್ಟರಿಯನ್ನು ತೆರೆಯಲು ಸ್ಥಳವನ್ನು ಕೊಡತಕ್ಕಂಥ ಮನಸ್ಸು ಮಾಡಿರುವುದು ತುಂಬಾ ಶೋಚನೀಯಂವಾದುದಾಗಿರುತ್ತದೆ. ಬೆಳಗಾಂನಲ್ಲಿಯೇ ಈ ಒಂದು ಫ್ಯಾಕ್ಟರಿಯನ್ನು ತೆಗೆಯಬೇಕೆಂದು ಹೊರಟಿರುವುದಕ್ಕೆ ಕಾರಣವೆಂದರೆ ಬೆಳಗಾಂ ಗಡಿ ಸೇರಿದಂತೆ ಮಹಾಜನ್ ಕಮಿಷನ್ ರಿಪೋರ್ಟ್ ಕೊಚ್ಚಿಕೊಂಡು ಹೋಗಬೇಕು ಎನ್ನುವ ಉದ್ದೇಶದಿಂದ ಇಷ್ಟೆಲ್ಲ ನಡೆಯುತ್ತಿದೆ. ಕರ್ನಾಟಕದ ಆಸ್ತಿ ಏನು ಇದೆ ಅದು ಕರ್ನಾಟಕದಲ್ಲಿಯೇ ಉಳಿದು ಉದ್ಯಮಿಗಳನ್ನು ಸ್ಥಾಪನೆ ಮಾಡಬೇಕೆನ್ನುವ ಪ್ರಮುಖವಾದ ಒಂದು ಭಾವನೆ ಇದ್ದರೆ ಬೆಳಗಾಂ ಒಳನಾಡಾದ ನೇಸರ್ಗಿ, ರಾಮದುರ್ಗ ಸವದತ್ತಿ ಗೋಕಾಕ್ ಈ ಭಾಗದಲ್ಲಿ ಎಲ್ಲಿಯಾದರೂ ತೆಗೆಯಲಿ ಅದಕ್ಕೆ ಕನ್ನಡಿಗರು ಯಾರು ಬೇಡವೆಂದು ಹೇಳುವುದಿಲ್ಲ ಅವರು ಈ ಭಾಗದಲ್ಲಿ ಬಂದು ಫ್ಯಾಕ್ಟರಿಯನ್ನು ತೆಗೆಯಲು ತಯಾರಾಗಿಲ್ಲ. ಬೆಳಗಾವಿ ಪಕ್ಕ ದಲ್ಲಿಯೇ ತೆರೆಯಬೇಕು, ಕನ್ನಡಿಗರಿಗೆ ಕಿರುಕೂಳಕೊಡಬೇಕು, ಕನ್ನಡಿಗರನ್ನು ಇಲ್ಲಿಂದ ಓಡಿಸಬೇಕೆಂ ಎನ್ನುವ ಭಾವನೆ ಏನು ಇದೆ ಅದನ್ನು ಅರ್ಥ ಮಾಡಿಕೊಳ್ಳಬೇಕು. ಉತ್ತರ ಪ್ರದೇಶದಿಂದ, ಪಂಜಾಬ್, ಬಿಹಾರ್‌ನಿಂದ ಫ್ಯಾಕ್ಟರಿಗಳನ್ನು ತೆಗೆಯಲು ಬಂದಾಗ ಯಾರೂ ಅದಕ್ಕೆ ತಕರಾರು ಮಾಡಲಿಲ್ಲ. ಟೆಕ್ಸ್‌ಟೈಲ್ ಫ್ಯಾಕ್ಟರಿಯನ್ನು ಬೆಳಗಾಮ್‌ನಗರದಲ್ಲಿ ತೆಗೆಯಲು ಶ್ರೀಮಾನ್' ಗೋಗಟೆಯವರಿಗೆ ನಮ್ಮ ಸರ್ಕಾರದವರು ಮಾತುಕೊಟ್ಟಿರುವುದಕ್ಕೆ ಬೆಳಗಾಮ್‌ನಗರದ ಜನರಿಗೆ ಯಾರಿಗೂ ಸಂತೋಷವನ್ನಿ ಉಂಟುಮಾಡಿಲ್ಲ. ಕನ್ನಡ ನೆಲದಲ್ಲಿರತಕ್ಕಂಥ ಜನರು ಹುರಿದೆದ್ದಿದ್ದಾರೆ. ಕನ್ನಡಿಗರಿಗೆ ಕೊಟ್ಟಂಥ ಮಾತಿಗೆ ತಪ್ಪಿನಡೆದರೆ ಅವರ ಕೋಪಕ್ಕೆ ತಾವು ತುತ್ತಾಗಬೇಕಾದೀತು. ಅಲ್ಲಿರುವ ಜನರ ಜೀವನವನ್ನು ಅರ್ಥಮಾಡಿಕೊಂಡು ಆ ಭಾಗವನ್ನು ಬಿಟ್ಟು ಬೆಳಗಾಂ ಒಳನಾಡಿನಲ್ಲಿ ಈ ಟೆಕ್ಸ್‌ಟೈಲ್ ಮಿಲ್‌ನ್ನು ತೆರೆಯಲು ಒಂದು ಸಾವಿರ ಎಕರೆ ಕೊಡಲಿ ಬೇಡವೆಂದು ಯಾರೂ ಹೇಳುವುದಿಲ್ಲ. ಸಂತೋಷದಿಂದ ಒಪ್ಪುತ್ತಾರೆ. ಆದರೆ ಬೆಳಗಾಮ್ ಪಕ್ಕದಲ್ಲಿಯೇ ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಬೆಳಗಾಮ್ ಗಡಿಯಲ್ಲಿರತಕ್ಕಂಥ ಪ್ರತಿಯೊಬ್ಬ ಕನ್ನಡಿಗರು ಅದನ್ನು ವಿರೋಧಿಸಿ ಉಗ್ರವಾಗಿ ಚಳುವಳಿಯನ್ನೇ ಮಾಡಲು ಹಿಂಜರಿಯುವುದಿಲ್ಲ. ಅಲ್ಲಿಯ ಹಿರಿಯ ನಾಗರೀಕರು ಹುರಿದೆದ್ದಾರೂ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಒಂದು ನೆಲಕ್ಕಾಗಿ ೬೦-೭೦ ವರ್ಷಗಳಿಂದಲೂ ಹೋರಾಟ ಮಾಡಿರತಕ್ಕಂಥ ಜನರು ಇದ್ದಾರೆ. ಹೈಸ್ಕೂಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಸಮಯದಿಂದಲೂ ಬೆಳಗಾಮ್‌ಗಾಗಿ ತ್ಯಾಗಮಾಡಿದಂಥ ಜನರು ಇದ್ದಾರೆ. ಅವರ ಮನಸ್ಸಿಗೆ ಇದರಿಂದ ನೋವುಂಟಾಗದಿರಲಾರದು. ಕನ್ನಡನಾಡಿಗಾಗಿ ಆತ್ಮಾರ್ಪಣೆ ಮಾಡಿದಂಥ ಜನರು ಇಂದು ಸ್ವರ್ಗಸ್ಥರಾಗಿದ್ದರೂ ಅವರ ಶಾಪ ತಟ್ಟದೆ ಇರಲಾರದು ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ತಮ್ಮ ನಿರ್ಣಯವನ್ನು ಬದಲಿಸಿ ತಾವು ಕೊಡಬೇಕೆಂದಿರುವ ಜಾಗವನ್ನು ಸ್ವಲ್ಪ ಬದಲಾಯಿಸಿಬೇರೆ ಕಡೆ ಅಲಾಟ್‌ಮಾಡಿ. ಬೆಳಗಾಂಜಿಲ್ಲೆ ಒಳನಾಡುಗಳಾದ ನೇಸರ್ಗಿ, ಗೋಕಾಕ್, ಸವದತ್ತಿ, ರಾಮದುರ್ಗದ ಕಡೆ ಕೊಡುವುದಕ್ಕೆ ನಮ್ಮದು ಯಾವ ತಕರಾರು ಇಲ್ಲವೆಂದು ಹೇಳಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ ಮಹಾಜನ್ ಕಮಿಷನ್ ವರದಿಯಲ್ಲಿ ಬೆಳಗಾವಿ ಪಟ್ಟಣ ಮತ್ತು ಬೆಳಗಾವಿ ಗಡಿಯಲ್ಲಿ ಮರಾಟ, ಕನ್ನಡಬಲ್ಲಂಥ ಜನ ಏನು ಇದ್ದಾರೆ ಅದೆಲ್ಲವನ್ನು ಕೊಟ್ಟಿದ್ದಾರೆ. ಬೆಳಗಾವಿ ಪಟ್ಟಣದಲ್ಲಿ ಮರಾಟಿಗರು ಸುಮಾರು ೫೨ ಪರ್ಸೆಂಟ್ ಜನ ಇದ್ದಾರೆ. ರೂರಲ್ ಬೆಳಗಾಮ್‌ನಲ್ಲಿ ಸುಮಾರು ೨೬ ಪರ್ಸೆಂಟ್ ಜನರು ಇದ್ದಾರೆ. ಈ ಹಿನ್ನೆಲೆಯಲ್ಲಿ ಯಾವುದಾದರೂ ಒಂದು ಇಂಡಸ್ಟ್ರಿಗೆ ಜಾಗವನ್ನು ಕೊಡಬೇಕಾದರೆ ಬಹುಶಃ ಅದರ ಹಿನ್ನೆಲೆಯನ್ನು ನಮ್ಮ ಸರ್ಕಾರದವರು ಪರೀಕ್ಷಿಸಬೇಕಾಗುತ್ತದೆಂದು ನನಗನಿಸುತ್ತದೆ. ಸ್ವಾಮಿ ಮಾನ್ಯ ಗೋಗಟೆಯವರಿಗೆ ಒಂದು ಟೆಕ್ಸ್‌ಟೈಲ್ ಮಿಲ್ಲನ್ನು ಕೊಡುವುದಕ್ಕೆ ನಮ್ಮ ಆಭ್ಯಂತರವೇನು ಇಲ್ಲ. ನಮ್ಮ ರಾಜ್ಯದಲ್ಲಿ ಇಂಡಸ್ಟ್ರೀಸ್ ಬರಬೇಕು ಎನ್ನುವ ವಿಚಾರದಲ್ಲಿ ಒಮ್ಮತ ಇದೆ. ಆದರೆ ಈಗಾಗಲೇ ಬೆಳಗಾಮ್‌ನಲ್ಲಿ ಅಲ್ಯೂಮಿನಿಯಮ್ ಕಾರ್ಖಾನೆಗೆ ಕೊಟ್ಟಿದ್ದೀರಲ್ಲ ಅಲ್ಲಿ ಕನ್ನಡಿಗರಿಗೆ ಉದ್ಯೋಗ ಎಷ್ಟು ಸಿಕ್ಕಿದೆ, ಎಷ್ಟು ಜನಕ್ಕೆ ಉದ್ಯೋಗವನ್ನು ಕೊಟ್ಟಿದ್ದಾರೆ ಸರ್ಕಾರದವರು ಹೇಳುವುದಕ್ಕೆ ಸಾಧ್ಯವೇ ? ಇವತ್ತಿನದಿವಸ ಬೇರೆ ಬೇರೆ ಕಾರ್ಖಾನೆಗಳನ್ನೇ ತೆಗೆದುಕೊಂಡರೂ, ಕೂಡ ಗೋಗಟೆ ಕಾರ್ಖಾನೆ ಒಂದೇ ಅಲ್ಲ ಕನ್ನಡಿಗರ

ಸಂಪತ್ತು ಬೇಕು, ನೆಲಬೇಕು ಜಲ ಬೇಕು, ವಿದ್ಯುಚ್ಛಕ್ತಿಬೇಕು. ಆದರೆ ಕನ್ನಡಿಗರಿಗೆ ಕೆಲಸ ಮಾತ್ರ ಇಲ್ಲ ಇದು ನಮ್ಮ ರಾಜ್ಯದ ದುರಾದೃಷ್ಟವಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳಿವರಾದ ಶ್ರೀಮಾನ್ ಗುಂಡೂರಾವ್‌ರವರು ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಕನ್ನಡಿಗರಿಗೆ ಕನ್ನಡ ನಾಡಿನಲ್ಲಿ ೧೦೦ಕ್ಕೆ ೧೦೦ ಉದ್ಯೋಗ ಎಂದು ಘೋಷಿಸಿದರು. ಅಲ್ಲಿ ಹೋಯಿತು ಆ ಘೋಷಣೆ. ಈವತ್ತಿನದಿವಸ ಎಲ್ಲ ರಾಷ್ಟ್ರಗಳಿಂದಲೂ ಬಂದಿರತಕ್ಕಂಥ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಮೋಸ ಆಗಿದೆ. ಈಗ ಆಗತಕ್ಕಂಥ ಕಾರ್ಖಾನೆಗಳಲ್ಲಿಯೂ ಮೋಸ ಆಗುತ್ತಿದೆ. ಮಾನ್ಯ ಗೋಗಟೆಯವರ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದಾರೆ ; ಅವರು ಮಹಾರಾಷ್ಟ್ರವಾದಿಗಳು. ಅವರು ಕೋರುತ್ತಿರುವ ಜಾಗ ಮಹಾರಾಷ್ಟ್ರಕ್ಕೆ ಬರುತ್ತದೆ ಎನ್ನುವುದೇ ಅವರ ಉದ್ದೇಶ. ಬೆಳಗಾಮ್ ನಗರ ಯಾವತ್ತಿದ್ದರೂ ಮಹಾರಾಷ್ಟ್ರಕ್ಕೆ ಸೇರ ಬೇಕು ಎನ್ನುವ ಉದ್ದೇಶ ಹೊಂದಿರುವ ಮಹಾರಾಷ್ಟ್ರ ಸರ್ಕಾರದವರು ಕೂಡಲೇ ಫ್ಯಾಕ್ಟರಿಯನ್ನು ತೆಗೆಯಲು ಕೇಂದ್ರ ಸರ್ಕಾರವು ಲೈಸೆನ್ಸ್ ಕೊಡಲು ಸಹಾಯವನ್ನು ಮಾಡಿರಬೇಕಾದರೆ, ಇದು ಎಷ್ಟು ಸೂಕ್ಷ್ಮವಾದ ವಿಚಾರವೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿರತಕ್ಕಂಥದ್ದು "I have had the matter thoroughly examined and I am satisfied that there are no grounds for these apprehensions". ನಮಗೆ ಏನು ಭಯವಾಗಿದೆ ಎಂದರೆ ಕನ್ನಡಿಗರ ಕೊಲೆಯಾಗಬೇಕು, ಕನ್ನಡಿಗರ ಆಸ್ತಿಪಾಸ್ತಿಗಳಿಗೆ ದಕ್ಕೆಯಾಗಬೇಕು, ಕನ್ನಡಿಗರ ಪ್ರಾಣಕ್ಕೆ ದಕ್ಕೆಯುಂಟಾಗಬೇಕು ಎನ್ನುವ ಉದ್ದೇಶ ದಿಂದ ಸರ್ಕಾರದವರು ಈ ಒಂದು ಕಾರ್ಖಾನೆಯನ್ನು ತೆಗೆಯಲು ಅವಕಾಶ ಕೊಡುತ್ತಿದ್ದಾರೆಯೇ. ಸದಾಕಾಲವು ದುರಾದೃಷ್ಟವಶಾತ್ ಕನ್ನಡಿಗರಿಗೂ ಮಹಾರಾಷ್ಟ್ರದವರಿಗೂ ಕ್ಲಾಶ್ ಆಗುತ್ತಲೇ ಇರು ತ್ತದೆ. ಅದನ್ನು ಹಿಂದೆಲ್ಲ ನೋಡಿದ್ದೇವೆ, ಕೇಳಿದ್ದೇವೆ. ಸ್ವಾಮಿ ಒಂದು ಕಾರ್ಖಾನೆಗೆ ಲೈಸೆನ್ಸ್‌ನ್ನು ಕೊಡುವಾಗ ಅವರು ಹೇಳುತ್ತಾರೆ and all such major industries would necessarily be obliged to recruit their skilled, semi-skilled and un-skilled personnel from the neighbouring villages". ಎಂದು ಹೇಳುತ್ತಾರೆ. ಸ್ವಾಮಿ ಈವತ್ತು ನಮ್ಮ ಸರ್ಕಾರ ೧೫ ವರ್ಷಗಳಿಂದ ತೆಗೆದಿರತಕ್ಕಂಥ ಕಾರ್ಖಾನೆಗಳಲ್ಲಿ ಎಷ್ಟುಜನ ಕನ್ನಡಿಗರನ್ನು ತೆಗೆದುಕೊಂಡಿರುತ್ತಾರೆಂದು ಕೇಳುತ್ತೇನೆ. ಮಹಾರಾಷ್ಟ್ರದವರು ನೆರೆರಾಜ್ಯಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕಾದರೆ ೧೦ರಷ್ಟು ಕಡ್ಡಾಯವಾಗಿ ಮರಾಟಿಗರನ್ನೇ ತೆಗೆದುಕೊಳ್ಳ ಬೇಕೆಂದಿರುವಾಗ, ಅಲ್ಲಿ ಮಹಾರಾಷ್ಟ್ರೀಯರು ಇಲ್ಲದಿದ್ದರೆ ಮಹಾರಾಷ್ಟ್ರದಿಂದ ಟ್ರಾನ್ಸ್‌ಫರ್ ಮಾಡಿ ತಕ್ಕಂಥ ಶರತ್ತಿನಮೇಲೆ ೧೦೦ಕ್ಕೆ ೧೦೦ರಷ್ಟು ಮರಾಟಿಗರನ್ನೇ ಉದ್ಯೋಗಕ್ಕೆ ತೆಗೆದುಕೊಳ್ಳುತ್ತಿರುವಾಗ, ನಮ್ಮ ಸರ್ಕಾರದವರು ಯಾವುದೋ ಒಂದು ಹಿತಾಸಕ್ತಿಗೆ ಒಳಪಟ್ಟು ಕನ್ನಡಿಗರ ಹಿತವನ್ನು, ಕರ್ನಾಟಕದ ಹಿತವನ್ನು ಬದಿಗೊತ್ತಿ ಅಕ್ಷಮ್ಯ ಅಪರಾಧವನ್ನು ಎಸಗುತ್ತಿದೆ ಎಂದು ಹೇಳಬೇಕಾಗಿರುತ್ತದೆ. ರೆವಿನ್ಯೂ ಬರುತ್ತದೆಂದು ಹೇಳುತ್ತೀರಿ ಅಂದರೆ ರೆವಿನ್ಯೂ ಬರುತ್ತದೆಂದು ಕನ್ನಡಿಗರನ್ನು ಮಾರಾಟಮಾಡಿ, ಕನ್ನಡಿಗರನ್ನು ಒಕ್ಕಲಿಬ್ಬಿಸಿ ರೆವಿನ್ಯೂ ಗಳಿಸತಕ್ಕಂಥದ್ದು ಏನು ಇದೆ ; ಹದಿನೈದು ದಿವಸಗಳಿಂದಲೂ ಬೆಳಗಾಮ್ ನಗರದಲ್ಲಿ ಬಳುವಳಿ ನಡೆಯುತ್ತಿದೆ. ಆದ್ದರಿಂದ, ನಮ್ಮನ್ನು ಕೇಳುತ್ತಿದ್ದೇನೆ, ಕನ್ನಡಿಗರು ಹಿತಾಸಕ್ತಿಯನ್ನು ಕಡೆಗಣಿಸಿ ಲೈಸೆನ್ಸ್‌ನ್ನು ಕೊಡತಕ್ಕಂಥದ್ದು ಸರಿಯಲ್ಲ. ಈ ಲೈಸೆನ್ಸ್ ಕೊಡತಕ್ಕಂಥ ದನ್ನು ರದ್ದು ಮಾಡಬೇಕು. ಹಾಗೆ ಲೈಸೆನ್ಸ್‌ನ್ನು ಕೊಡುವುದಾದರೂ ಇದ್ದರೆ ಬೇರೆ ಕಡೆ ಅಂದರೆ ಸವದತ್ತಿಯಲ್ಲಿ ಫ್ಯಾಕ್ಟರಿಯನ್ನು ತೆಗೆಯಲು ಕೊಡಿ ಅಲ್ಲಿ ಅಕ್ಕಿ ಬೆಳೆಯತಕ್ಕಂಥ ಜಾಗ ನೀರಿನ ತೊಂದರೆ ಇರುವುದಿಲ್ಲ ಕರೂ ಇದ್ದಾರೆ. ಎಲ್ಲವಿಧವಾದ ಅವಕಾಶವೂ ಇರುತ್ತದೆ. ಅಲ್ಲಿಯ ಶಾಸಕರು ಕೂಡ ಒಂದು ಅಮೆಂಡ್‌ಮೆಂಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ. ೧೫ ಜನ ಶಾಸಕರು ಅದಕ್ಕೆ ರುಜುಮಾಡಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಕೊಟ್ಟಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ಟಿಕ್ಸ್‌ಟೈಲ್ ಮಿಲ್ಲನ್ನು ತೆಗೆಯಲು ಸರ್ಕಾರದವರು ಅವಕಾಶವನ್ನು ಕಲ್ಪಿಸಿಕೊಟ್ಟರೆ ಶೇರನ್ನು ಕಲೆಕ್ಟ್ ಮಾಡು ತ್ತೇವೆಂದು ಹೇಳಿದ್ದಾರೆ. ಈ ಒಂದು ಅಂಶವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು, ಸೂಕ್ಷ್ಮ ಪರಿಸ್ಥಿತಿ ಇರತಕ್ಕಂಥ ಬಾರ್ಡರ್ ಪ್ರದೇಶದಲ್ಲಿ ಯಾವ ಸಮತೋಲನವು ಹೆಚ್ಚುಕಡಿಮೆಯಾಗದಂತೆ ನೋಡಿಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI M. VEERAPPA MOILY (Minister for Finance).—Sir, I wish to make the following statement on behalf of the Chief Minister.

Gogte Textiles Limited have obtained an industrial licence for setting up a textile mill project in Karnataka and the Textile Commissioner has issued necessary permits for installing a spinning mill of 50,000 spindles for spinning cotton and synthetic yarn. The project would be implemented in two phases of 25,000 spindles each and would include well equipped processing house and later on a composite textile mill. The first phase of the project would involve an investment outlay of Rs. 8,00 crores providing employment to about 1,000 workers on a three shift basis. After completing all the phases of expansion, including the setting up of looms and processing house the employment would go upto about 1,500 workers on a three shift basis with an investment outlay of Rs. 15/16 crores The party has already placed orders for the Spinning Mill machinery and has paid advances to machinery manufacturers it has also approached Central financial institutions like ICICI, IDBI and IFCI for assistance by way of term loans.

The Company had applied to the Government of Karnataka for 90 acres of land which had been allotted to them at Mache village. Subsequently, the party indicated that he would like to locate the mill at S. No. 536 measuring about 100 acres of Honage village about 10KM from Belgaum off the Belgaum-Poona Highway. This land is shown in the records as a forest survey number. However, there is no tree growth and in consultation with the Forest Department it has been decided to allot this land to the party in exchange for the land originally proposed to be allotted at Mache village. Necessary clearance has been obtained from the Government of India also for the allotment of this forest survey number, in accordance with the provisions of the Forest Conservation ordinance.

"I am aware that representations have been received expressing apprehensions that the setting up of this unit would not materially benefit the people of our own State." I have had the matter thoroughly examined and I am satisfied that there are no grounds for these apprehensions The plot selected is within Karnataka and all such major industries would necessarily be obliged to recruit their skilled, semi-skilled and unskilled personnel from the neighbouring villages. The setting up of this industry will also create indirect employment opportunities and will earn revenues to the State Government in-terms of taxes and levies. The products from the mills will also be utilised for the establishment of down-stream industries, while cotton and other raw materials would be purchased from within our own State.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂತಹ ಕೆ. ಶ್ರೀನಿವಾಸ್ ಅವರು, ಪಾಟೀಲ್ ಅವರು ಮಂತ್ರಿ ಶ್ರೀ ರಾಮದೇವ್ ಅವರು ಈ ಭೂಮಿಯನ್ನು ಕೊಡತಕ್ಕ ಬಗ್ಗೆ ಆಕ್ಷೇಪಣೆಯನ್ನು ಎತ್ತಿದ್ದಾರೆ. ನಾನು ಓದಿದಂತಹ ಹೇಳಿಕೆಯ ಪ್ರಕಾರ ಹಿಂದೆ ಮಚ್ಚೆ ಗ್ರಾಮದಲ್ಲಿ ಭೂಮಿಯನ್ನು ಕೊಟ್ಟಿತ್ತು. ಆ ಲೈಸನ್ಸ್‌ನ್ನು ಕೊಟ್ಟಿದ್ದು ಸುಮಾರು ಒಂದೂವರೆ ಎರಡು ವರ್ಷಗಳ ಹಿಂದೆ. ಆದನ್ನು ಕೊಟ್ಟಿದ್ದು ಟೆಕ್ಸ್‌ಟೈಲ್ ಮಿಲ್ಲಿಗೆ. ಮಚ್ಚೆ ಗ್ರಾಮದಲ್ಲಿ ಈ ಬಗ್ಗೆ ಜಾಗವನ್ನು ಕೊಡಬೇಕೆಂದು ಹೇಳಿ ಕೊಟ್ಟಿದ್ದು ನಮ್ಮ ಗುಂಡೂರಾಯರ ಸರ್ಕಾರ ಬರುವ ಮೊದಲು. ಮಾನ್ಯ ಶ್ರೀನಿವಾಸ್ ಅವರು ಮಂತ್ರಿಗಳಾಗಿದ್ದಾಗ, ಶ್ರೀ ಆರ್.ಎಸ್. ಪಾಟೀಲರು ಮಂತ್ರಿಮಂಡಲದಲ್ಲಿದ್ದಾಗ ಲೈಸೆನ್ಸ್ ಕೊಟ್ಟಿದ್ದು. ಇದು ಆಗಿನದು. ಆ ಹೊತ್ತಿನಲ್ಲಿ ಮಚ್ಚೆ ಗ್ರಾಮದಲ್ಲಿ ಇದನ್ನು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದು ಆಫ್‌ಕೋರ್ಸ್, ನಮ್ಮ ಸಯನಕ್ ಅವರು ಇಲ್ಲಿ ಇದ್ದಾರೆ. ಅವರಿಗೆ ಈ ಬಗ್ಗೆ ಪ್ರಚೋದನೆಯನ್ನು ಯಾರೂ ಕೊಟ್ಟಿಲ್ಲ. ಈ ಹೇಳಿಕೆಯನ್ನು ಪೇಳುವಾಗ ಅವರು ಪ್ರಚೋದನೆಗೆ ಬರಬಹುದೆಂದು ಹೆದರಿಕೆ. ಅವರು ಒಳ್ಳೆಯವರೇ. ಅವರು ಪ್ರಚೋದನೆಗೊಳ್ಳುವುದಿಲ್ಲ. ಮಚ್ಚೆ ಗ್ರಾಮದಲ್ಲಿ ಇದನ್ನು ಕೊಡಬೇಕೆಂದು ಆರ್.ಎಸ್. ಪಾಟೀಲರು ಆ ಜಿಲ್ಲಾ ಮಂತ್ರಿಗಳಾಗಿದ್ದಾಗ ಏನು ನಡೆಯುತ್ತಿದೆ ಎಂದು ಅವರಿಗೆ ಗೊತ್ತೇ ಇರಲಿಲ್ಲ ಪಾಪ. ಈಗ ನಾವು ಒರೀ ಮಾತಿನಲ್ಲಿ ದೇಶದ ಆಥವಾ ಕರ್ನಾಟಕ ರಾಜ್ಯದ ಬಗ್ಗೆ ಪ್ರೀತಿಯನ್ನು ಹರಿಸದೇ ನಮ್ಮ ನರನರದಲ್ಲೂ ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಪ್ರೇಮವನ್ನು ತುಂಬಿಕೊಂಡಿರಬೇಕು. ನರನಾಡಿಗಳಲ್ಲಿ ರಾಜ್ಯದ ಪ್ರೀತಿಯ ರಕ್ತ ಹರಿಯಬೇಕು. ಆದರೆ ಇದನ್ನು ನಾವು ಅಧಿಕಾರ ಇದ್ದ ಸಮಯದಲ್ಲಿ ಮರೆತುಬಿಡುವುದು ಬೇಡ. ಆಗ ಲೈಸೆನ್ಸ್ ಕೊಟ್ಟಾಗ ಮಚ್ಚೆ ಗ್ರಾಮ ಮಹಾಜನ್ ವರದಿ ಪ್ರಕಾರ ಮಹಾರಾಷ್ಟ್ರಕ್ಕೆ ಹೋಗಬೇಕು. ಆ ಜಾಗದಲ್ಲಿ ನಾವು ಕೈಗಾರಿಕೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುವುದು ಇದೆ. ಅಲ್ಲಿ ನಾವು ಕೈಗಾರಿಕೆಯನ್ನು ಮಾಡಿಕೊಟ್ಟು ನಾವು ಅದನ್ನು ಮಹಾರಾಷ್ಟ್ರಕ್ಕೆ ಕಳುಹಿಸುವುದೇ? ಈ ಸಂಚೇ ಅವರದ್ದು. ಈಗ ನಮ್ಮ ದೇಶಾಭಿಮಾನದ ವಿಚಾರವನ್ನು ಹೇಳುತ್ತಿದ್ದಾರೆ. ಈ ಒಂದು ಚಿಂತನೆಗೆ ನಾವು ಸಮ್ಮತಿ ಕೊಡಬಾರದು. ಇದು ನಮ್ಮ ರಾಜ್ಯದ ಚಿಂತನೆ. ಇದು ನಮ್ಮ ರಾಜ್ಯದ ಹಿತಚಿಂತನೆ ಇದೆ, ನಾವು ನಮ್ಮ ರಾಜ್ಯದ ಹಿತಚಿಂತನೆ ಮಾಡಬೇಕು. ಇದು ಅಧಿಕಾರ ಇದ್ದಾಗಲೂ ಇರಬೇಕು. ಅಧಿಕಾರದಿಂದ ಹೊರಗೆ ಹೋದಾಗಲೂ ಇರಬೇಕು. ಈಗ ಅಲ್ಲಿ ಮಚ್ಚೆ ಗ್ರಾಮವನ್ನು ಬಿಟ್ಟು ಹೊಣಗೆ ಗ್ರಾಮಕ್ಕೆ ಕೊಡಲಾಗಿದೆ. ಮಹಾಜನ್ ವರದಿ ಪ್ರಕಾರ ಈ ಗ್ರಾಮ ನಮ್ಮಲ್ಲಿಯೇ ಉಳಿಯುತ್ತದೆ. ಇದು ಕೋಟ್ಯಾಂತರ ರೂಪಾಯಿಯ ಕೈಗಾರಿಕೆ ಇದ್ದು ಇದು ಯಾವ ಸಂದರ್ಭದಲ್ಲಿಯೂ ನಮ್ಮ ಕೈ ಬಿಟ್ಟು ಹೋಗಬಾರದು. ಈಗ ಕೈಗಾರಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಬೇಕೆಂದು ಒಬ್ಬರು ಎಂಟ್ರಪ್ರೆನೀರ್ ಬಂದಿದ್ದರು. ಈ ಬಗ್ಗೆ ಮೊನ್ನೆ ಮಾನ್ಯ ಮುಖ್ಯಮಂತ್ರಿಯವರೂ ಮುಂಬೈಗೆ ಹೋಗಿದ್ದರು. ನಾವು ಅಲ್ಲಿಗೆ ಹೋದಾಗ ನಮ್ಮ ಕರ್ನಾಟಕಕ್ಕೆ ಬಂದು ಕೈಗಾರಿಕೆಯನ್ನು ಮಾಡಿ ಎಂದು ಆಹ್ವಾನವನ್ನು ಕೊಟ್ಟಿದ್ದೆವು. ಅದೇ ಪ್ರಕಾರ ಅಲ್ಲಿಗೆ ಕೇರಳದ ಮುಖ್ಯಮಂತ್ರಿಗಳೂ ಹೋಗಿದ್ದರು. ಕೇರಳದ ಆರ್ಥಮಂತ್ರಿಗಳೂ ಹೋಗಿದ್ದರು, ನಾವು ಎಲ್ಲ ಸವಲತ್ತುಗಳನ್ನು ಕೊಡುತ್ತೇವೆ. ಹೇಗಾದರೂ ಈ ಕರ್ನಾಟಕದಲ್ಲಿ ಉದ್ಯಮಗಳು ಬೆಳೆಯಬೇಕು. ಇಲ್ಲಿ ಬಂಡವಾಳ ಹೂಡಿಕೆಯಾಗಬೇಕು. ನಮ್ಮ ಜನರಿಗೆ ಹೆಚ್ಚು ಕೆಲಸ ಸಿಗಬೇಕು ಎಂದು ಈ ಒಂದು ಉದ್ದೇಶದಿಂದ ಅವರಿಗೆ ಆಹ್ವಾನವನ್ನು ಕೊಟ್ಟಾಗ ಯಾವುದು ನಮ್ಮ ಕೈಬಿಡದೇ ಇರತಕ್ಕ ಗ್ರಾಮ ಇರುತ್ತದೆ ಅಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ತಿಳಿಸೋಣ. ನಾವು ಇಲ್ಲಿ ಹೊಸದಾಗಿ ಜಾಗವನ್ನು ಕೊಡುತ್ತಾ ಇಲ್ಲ. ಈ ಹಿಂದೆ ನಿರ್ಣಯ ತೆಗೆದುಕೊಂಡಿದ್ದು ಮಚ್ಚೆ ಗ್ರಾಮದಲ್ಲಿ. ನಮ್ಮ ರಾಜ್ಯದ ಹಿತಾಸಕ್ತಿಯನ್ನು ಮತ್ತು ಪ್ರಾಮುಖ್ಯತೆಯನ್ನು ಗುರಿಯಲ್ಲಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಯವರು ಕೊನೆಗೆ ಈ ಮಚ್ಚೆ ಗ್ರಾಮಕ್ಕೆ ಕೊಡುವುದು ಬೇಡ ಎಂದಾಯಿತು. ಇದರಲ್ಲಿ ಕರ್ನಾಟಕದ ಹಿತಾಸಕ್ತಿ ಅಡಗಿದೆ ಎನ್ನುವ ವಿಚಾರವನ್ನು ನಾವು ಮರೆಯಬಾರದು ಎಂಬುದನ್ನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಏಕೆಂದರೆ ಕರ್ನಾಟಕದ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ಇರತಕ್ಕ ಹಿತಾಸಕ್ತಿಯನ್ನು, ನಮ್ಮ ಸರ್ಕಾರಕ್ಕೆ ಇರತಕ್ಕ ನೈತಿಕ ಹಕ್ಕನ್ನು, ನಾವು ಕಳೆದುಕೊಂಡಿದ್ದೀರಿ.

ಶ್ರೀ ಜೆ. ಹೆಚ್. ಪಟೇಲ್.—ಯಾರೇ ತಪ್ಪು ಮಾಡಿದರೆ ಅದನ್ನು ತಪ್ಪು ಎಂದು ನಾವು ಹೇಳುತ್ತೇವೆ. ಕರ್ನಾಟಕದ ಮೇಲಿನ ನೈತಿಕ ಹಕ್ಕು ನಮಗೂ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮಗೆ ನೈತಿಕ ಹಕ್ಕು ಇದೆ ಎಂದು ತಾವು ಹೇಳುತ್ತಿದ್ದೀರಿ. ಆ ರೀತಿಯಾಗಿದ್ದರೆ ನಾನು ಉತ್ತರ ಕೊಡುತ್ತಿರಲಿಲ್ಲ. ಈ ಬಗ್ಗೆ ಪ್ರಚೋದನೆ ಬರುವುದು ಯಾವಾಗ? ಯಾರು ಕರ್ನಾಟಕದ ಹಿತಾಸಕ್ತಿಯನ್ನು ಪೂರ್ತಿ ಬದಿಗೊತ್ತಿ ಯಾವಾಗಲೂ ಕರ್ನಾಟಕದ ವಿರುದ್ಧವಾಗಿ ಕೆಲಸ ಮಾಡುತ್ತಿದ್ದರೋ ಅವರ ವಿಚಾರವಾಗಿ ನಾವು ಮಾತನಾಡುತ್ತಿದ್ದೇವೆ. ಇದು ತಮ್ಮ ವಿಚಾರ ಅಲ್ಲ. ಶ್ರೀಮಾನ್ ದೇವೇಗೌಡರು ಮಾತನಾಡಿದರು ಅಂತ ನಾನು ಈ ವಿಚಾರ ಹೇಳುವುದಿಲ್ಲ. ಪ್ರಚೋದನೆ ಮಾಡತಕ್ಕಂಥಾವನ ಮೇಲೆ ಹೇಳಬೇಕಾಗುತ್ತದೆ.

SRI K.H. SRINIVAS.—We will go to the next point.

SRI M. VEERAPPA MOILY.—Unfortunately ಇದು ನೆಲ ಜಲದ ವಿಚಾರ. ಇದರ ಬಗ್ಗೆ ಚಿಂತನೆ ಮಾಡಬೇಕು. ಇದು ಬರೇ ಬಾಯಿ ಮಾತಿನ ಸೋಗಾಗಬಾರದು ಅದಕ್ಕೆ ಹೇಳುತ್ತಿದ್ದೇನೆ. ಈವೊತ್ತು ಅರಿಸಿರತಕ್ಕಂಥಾ ಈ ಫಾರೆಸ್ಟ್ ಜಾಗ ಏನು ಇದೆ ನಿಜವಾಗಿಯೂ ಹೇಳಬೇಕಾದರೆ ಇದು ಫಾರೆಸ್ಟ್ ಅಲ್ಲದ ಜಾಗ ಅಲ್ಲಿಗೆ ಹೋದಾಗ ಅದು ಗೊತ್ತಾಗುತ್ತದೆ. ಈ ಹೊನಗೆ ವಿಲೇಜ್ ಏನು ಇದೆ ಈ ಏರಿಯಾದಲ್ಲಿ ಫಾರೆಸ್ಟ್ ಬೆಳೆಯುವುದಕ್ಕಾಗುವುದಿಲ್ಲ. ಮಚ್ಚೆ ಅನ್ನುವ ವಿಲೇಜ್‌ನಲ್ಲಿ ಸಾಕಷ್ಟು ಫಾರೆಸ್ಟ್ ಬೆಳೆಯಬಹುದು, ಅಲ್ಲಿ ಸಾಕಷ್ಟು ಫಾರೆಸ್ಟ್ ಬೆಳೆಯುವುದಕ್ಕೂ ಸಾಧ್ಯ ಇದೆ. ಆದರೆ ಹೊಣಿಗೆ ಅನ್ನುವ ವಿಲೇಜ್‌ನಲ್ಲಿ ಫಾರೆಸ್ಟ್ ಬೆಳೆಯಲಿಕ್ಕೆ ಸಾಧ್ಯವಿಲ್ಲಾ. ಅಂಥಾ ಕಡೆ ಈ ಕಾರ್ಖಾನೆ ಕೊಟ್ಟಿದ್ದೀರಾ. Ofcourse, it is classified as forest. ಈ ಜಾಗದಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ ಏನು ಇದೆ ಅದು ಸುಮಾರು ೬ ಕಿಲೋಮೀಟರ್ ದೂರದಲ್ಲಿದೆ. ಯಾವ ಕಾರ್ಖಾನೆಯನ್ನೇ ತೆಗೆದುಕೊಳ್ಳಿ ನಮ್ಮಲ್ಲಿರುವ ಕಾರ್ಖಾನೆಗಳು ಎಲ್ಲಾ ಗಡಿಯಲ್ಲೇ ಇವೆ. ಒಂದು ಷುಗರ್ ಫ್ಯಾಕ್ಟರಿಯನ್ನೇ ತೆಗೆದುಕೊಳ್ಳಿ ಅದೂ ಕೂಡ ಗಡಿಯಲ್ಲೇ ಇದೆ. ತಮಗೆ ಇನ್ನೊಂದು ವಿಚಾರ ಹೇಳಬೇಕಾದರೆ ಕೊಲ್ಲಾಪುರದ ಭಾಗದಲ್ಲಿ ಹತ್ತಿ ಬೆಳೆಯುವುದಿಲ್ಲ. ನಮ್ಮ ಭಾಗದಲ್ಲಿ ಇರತಕ್ಕಂಥಾವರೇ ಹತ್ತಿ ಬೆಳೆಯುತಕ್ಕಂಥಾವರು, ಈ ಭಾಗಕ್ಕೆ ತಕ್ಕಂಥಾ ಕಾರ್ಖಾನೆ ಬರಬೇಕು. ಅದು ಬಿಟ್ಟು ಮಹಾರಾಷ್ಟ್ರದಲ್ಲಿ ಆ ಕಾರ್ಖಾನೆ ಹಾಕಿದರೆ ಏನು ಪ್ರಯೋಜನವಾಗುವುದಿಲ್ಲ. ಒಂದು ವೇಳೆ ಲಾಭವಾಗುವುದು ಇದ್ದರೆ ಅದು ನಮ್ಮ ಭಾಗದವರಿಗೇನೇ. ಆದುದರಿಂದ ನಾವು ಇಲ್ಲಿ ಯಾವ ಒಂದು ಕಾರ್ಖಾನೆ ಹಾಕಿದರೂ ಕೂಡ ೫೦೦ ರೂಪಾಯಿ ಒಳಗೆ ಸಂಬಳಕೊಡತಕ್ಕಂಥಾ ವರ್ಕರ್ಸ್ ಅನ್ನು ಸ್ಥಳೀಯದಲ್ಲೇ ಇರುವವರನ್ನು ನೇಮಕ ಮಾಡಿಕೊಳ್ಳಬೇಕು ಅಂತ ಮಾಡಿದ್ದೇವೆ, ಸ್ಥಳೀಯವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥಾ ಕನ್ನಡಿಗರನ್ನು ಆದರಲ್ಲೂ ಆ ಭಾಗದಲ್ಲಿರತಕ್ಕಂಥಾ ಕನ್ನಡಿಗರನ್ನೇ ಅಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕು ಅಂತ ಮಾಡಿರುವುದರಿಂದ ಈ ಒಂದು ಕಾರ್ಖಾನೆ ಅಲ್ಲಿಗೆ ಬರುವುದರಿಂದ ಇದರಿಂದ ಅಲ್ಲಿಯ ಸ್ಥಳೀಕರಿಗೆ ಪ್ರಯೋಜನವಾದಂತಾಗುವುದಿಲ್ಲವೇ. ಆ ಭಾಗದಲ್ಲಿ ಯಾರು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೋ ಅಂಥಾವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು ಅಂತ ಮಾಡಿದ್ದೇವೆ. ಆದರಿಂದ ನಮಗೆ ಪ್ರಯೋಜನವಾಗುತ್ತದೆ ಆದರೆ ಇದರಲ್ಲಿ ಸೇಲ್ಸ್‌ಟ್ಯಾಕ್ಸ್ ನಮಗೆ ಬರುವುದಿಲ್ಲ. ಮಹಾರಾಷ್ಟ್ರ ಸರ್ಕಾರಕ್ಕೆ ಹೋಗುತ್ತದೆ. ನಮ್ಮಲ್ಲಿರತಕ್ಕಂಥಾ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡರೂ ಕೂಡ ನಮಗೆ ಬರತಕ್ಕಂಥಾ ಯಾವ ಆದಾಯ ಇದೆ ಆದನ್ನು ತೆಗೆದುಕೊಳ್ಳುವುದರಲ್ಲಿ ಪ್ರಯತ್ನ ಮಾಡಬೇಕು. ಈ ಒಂದು ದಿಶೆಯಲ್ಲಿ ನಾವು ಹೋಗಬೇಕು. ಬೇರೆ ರಾಜ್ಯಗಳಲ್ಲೂ ಕೂಡ ಯಾವ ಕೈಗಾರಿಕೆ ಬಂದರೂ ಸಹ ಆ ಭಾಗದಲ್ಲಿ ಮರಾಠಿ ಮಾತನಾಡುವವರೇ ಇರಲಿ ಯಾರೇ ಇರಲಿ, ನಾವೆಲ್ಲಾ ಭಾರತೀಯರು ಅಂತ ತಿಳಿದುಕೊಂಡು ನಾವು ಮಾನ್ಯಿಡೆಯಬೇಕೇ ವಿನಾ ವೃಥಾ ಆರೋಪ ಮಾಡುವುದು ಸರಿಯಾಗಲಾರದು. ಯಾವ ಸರ್ಕಾರವೇ ಆಗಲಿ ಯಾವ ಉದ್ಯಮಿಗಳು ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಬಂದರೆ ಆ ಉದ್ಯಮಿಗಳನ್ನು ನಿರಾಕರಿಸಿದ್ದೇ ಆದರೆ ಅಥವಾ ಅಂಥಾ ಉದ್ಯಮ ಬೇರೆ ಕಡೆ ಹಾಕಲಿ ನಮ್ಮ ಭಾಗದಲ್ಲಿ ಬೇಡ ಅನ್ನುವುದಾದರೆ, ಈ ದಿಶೆಯಲ್ಲಿ ಯಾರಾದರೂ ಹೆಜ್ಜೆ ಇಡುವುದಾದರೆ ಅವರು ಯಾವ ದೇಶವನ್ನೂ ಕಟ್ಟುವುದಕ್ಕಾಗುವುದಿಲ್ಲ. ಯಾವ ರಾಜ್ಯವನ್ನು ಕಟ್ಟುವುದಕ್ಕಾಗುವುದಿಲ್ಲ. ನಾವು ಸಹ ಈ ಒಂದು ದಿಶೆಯಲ್ಲಿ ಹೋದರೆ ಯಾವ ರಾಜ್ಯವನ್ನೂ, ಯಾವ ದೇಶವನ್ನು ಕಟ್ಟುವುದಕ್ಕಾಗುವುದಿಲ್ಲ ಈಗ ನಾವು ಡೈರೆಕ್ಟರೇಟ್ ಆಫ್ ಇಂಡಸ್ಟ್ರೀಸ್‌ನಲ್ಲಿ ಒಂದು ಸೆಲ್ ಮಾಡಬೇಕು ಅಂತ ಇದ್ದೇವೆ. ತಾವುಗಳು ಇಂಥಾ ಉದ್ಯಮಿಗಳನ್ನು ಅಲ್ಲಿ ಕೊಡಬೇಡಿ, ಇಲ್ಲಿ ಕೊಡಬೇಡಿ ಅಂತ ಅಭಿಪ್ರಾಯಪಟ್ಟರೆ, ಇವರು ಕನ್ನಡಿಗರು ಇವರು ಕನ್ನಡಿಗರು ಅಲ್ಲದವರು ಅಂತ ಅಭಿಪ್ರಾಯ ಪಟ್ಟರೆ We will be shutting out. The

enterprenuers, Non Kannadigas will be prevented from establishing industries in Karnataka. ಈ ಒಂದು ಸಂಕುಚಿತ ಭಾವನೆಯನ್ನು ಬಿಡಬೇಕು. ಭಾರತ ಸರ್ಕಾರದವರೇ ಆಗಲಿ ಯಾರೇ ಆಗಲಿ ಇಂಥಾ ಒಂದು ನಿರ್ಣಯವನ್ನು ತೆಗೆದುಕೊಳ್ಳಬಾರದು. ಒಂದು ವೇಳೆ ಈ ತರಹ ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥಾ ಹವ್ಯಾಸಕ್ಕೆ ಹೋದರೆ ಯಾವ ದೇಶವಾಗಲಿ ಯಾವ ರಾಜ್ಯವಾಗಲಿ ಜೀವಂತವಾಗಿ ಇರುವುದಿಲ್ಲ ಎಂದು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. From the Forest Department we have got information to say that Macche village is preferable for afforestation. There is a technical report from the Forest Department. ಈ ಎಲ್ಲಾ ಆಧಾರದ ಮೇಲೆ ಈ ಕೈಗಾರಿಕೆಯನ್ನು ಈ ಪ್ರದೇಶದಲ್ಲಿ ಬೆಳೆಸಿದ್ದಾರೆ. ಯಾವುದೇ ರಾಜ್ಯವಾಗಲಿ ಇದಕ್ಕೆ ಅಡ್ಡಿ ಬರುವುದಿಲ್ಲ. ಆ ಗ್ರಾಮ ದವರು ಮುಖ್ಯಮಂತ್ರಿಗಳನ್ನು ಕರೆದಿದ್ದಾರೆ. ನಾವೆಲ್ಲರೂ ಅಲ್ಲಿ ಊಟ ಮಾಡಿದ್ದೇವೆ. ಈ ಬಗ್ಗೆ ಮಾನ್ಯ ಸದಸ್ಯರು ಭಯ ಮತ್ತು ಒಂದು ಶಂಕೆಯನ್ನು ಏನು ವ್ಯಕ್ತ ಮಾಡಿದ್ದಾರೆ ಅದರ ಬಗ್ಗೆ ಹೇಳುವುದಾದರೆ ಅಂಥಾ ಭಯ, ಶಂಕೆ ಇಟ್ಟುಕೊಳ್ಳಬೇಕಾದ್ದಿಲ್ಲ. ಇಂಥಾ ಒಂದು ಭಯ ಶಂಕೆ ಮಾನ್ಯ ಸದಸ್ಯರಿಗೆ ಬರುವುದು ಸ್ವಾಭಾವಿಕ. ಆದರೆ ಅದನ್ನೆಲ್ಲಾ ನಿವಾರಣೆ ಮಾಡಬೇಕಾದ್ದು ನಮ್ಮ ಕರ್ತವ್ಯವೂ ಆಗಿರುತ್ತದೆ. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಸ್ಥಳೀಯವಾಗಿ ಇರತಕ್ಕಂಥಾ ಕನ್ನಡಿಗರಿಗೆ ಪ್ರಯೋಜನವಾಗುವಂಥಾ ಉದ್ಯಮಗಳನ್ನು ಬೆಳೆಸಬಾರದು ಅನ್ನುವ ಒಂದು ಹವ್ಯಾಸಕ್ಕೆ ಹೋಗಬಾರದು, ಹಾಗೂ ತೊಂದರೆ ಮಾಡಬಾರದು ಎಂದು ಹೇಳುತ್ತೇನೆ. ಈಗಾಗಲೇ ನಮ್ಮ ಇಲಾಖೆಯವರು, ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ಉದ್ಯಮಿಗಳಿಗೆ ಹೇಳಿದ್ದಾರೆ. ನೀವು ಈ ಕೈಗಾರಿಕೆಯನ್ನು ಕ್ಷಿಪ್ರವಾಗಿ ಮಾಡಬೇಕು. ಫಲವತ್ತಾಗಿ ಇದನ್ನು ಬೆಳೆಸಬೇಕು. ಈ ಗ್ರಾಮಕ್ಕೇನೇ ಆ ಕೈಗಾರಿಕೆ ಬರುವುದಾದರೆ ಇದು ಇಡೀ ದೇಶದ ಒಂದು ಆಸ್ತಿಯಾಗಿ ಉಳಿಯುತ್ತದೆ. ಈ ಒಂದು ಆಲೋಚನೆ ಇಟ್ಟುಕೊಂಡೇ ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದೆ ಹಾಗೂ ಉದ್ಯಮಿಗಳೂ ಕೂಡ ಆಲೋಚನೆ ಮಾಡಿದ್ದಾರೆ. ಒಂದು ವೇಳೆ ಸರ್ಕಾರ ಇದರ ಬಗ್ಗೆ ಇಂಟರ್‌ಫಿಯರ್ ಮಾಡದೇ ಹೋದರೆ If there were no interference from the Government what would have been the result ಅದನ್ನು ಆಲೋಚನೆ ಮಾಡಬೇಕು. ಬೆಳಗಾಂ ಜಿಲ್ಲೆಯ ಮಚ್ಚೆ ಗ್ರಾಮದಲ್ಲಿ ಈ ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ, ಇದು ಸುಮಾರು ೮ ಕೋಟಿ ರೂಪಾಯಿನ ಒಂದು ಉದ್ಯಮ, ಇದರಿಂದ ನಮ್ಮ ಕರ್ನಾಟಕ ರಾಜ್ಯವನ್ನು ಉಳಿಸಿ ಕೊಂಡು ಹಾಗೂ ಕಾಪಾಡಿಕೊಂಡು ಹಾಗೂ ನಮ್ಮ ಜನರ ಹಿತಾಸಕ್ತಿಯೂ ಕೂಡ ಉಳಿಯುತ್ತದೆ. ಅಲ್ಲದೆ ನಮ್ಮ ಜನಕ್ಕೆ ಇದರಿಂದ ಆಗಬೇಕಾದಂಥಾ ಉಪಯೋಗ, ಹಾಗೂ ಗಡಿಯ ಸುತ್ತಮುತ್ತ ಕೈಗಾರಿಕೆ ಬೆಳೆದು ನಮ್ಮ ಜನರ ಒಂದು ಬೆಳವಣಿಗೆಗೂ ಕೂಡ ಅನುಕೂಲವಾಗುತ್ತದೆ. ಈ ಗ್ರಾಮವನ್ನು ನಾವು ತೆಗೆದುಕೊಳ್ಳದೇ ಹೋದರೆ, ಈ ಗ್ರಾಮದಲ್ಲಿ ನಾವು ಕೈಗಾರಿಕೆಯನ್ನು ಮಾಡದೇ ಹೋದರೆ ಬಹುಶಃ we would have forfeited a very big asset. It is a possibility. ಇದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ತಾವು ಇದರ ಬಗ್ಗೆ ಪೆಚ್ಚು ಪ್ರಸ್ತಾಪ ಮಾಡದೇ ಈ ವಿಚಾರದಲ್ಲಿ ತಮಗೇನಾ ಶಂಕೆ ಇದೆ, ಭಯ ಇದೆ, ಅದನ್ನು ಪರಿಹಾರ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಸರ್ಕಾರ ಖಂಡಿತವಾಗಿಯೂ ತೆಗೆದುಕೊಳ್ಳುತ್ತದೆ ಅನ್ನುವ ಆಶ್ವಾಸನೆಯನ್ನು ಕೊಡುತ್ತೇನೆ. ಸರ್ಕಾರವೂ ಕೂಡ ತಾವು ಹೇಳಿದಂಥಾ ನೀತಿಯನ್ನೇ ಅನುಸರಿಸಿ, ಗಮನದಲ್ಲಿಟ್ಟುಕೊಂಡು ಯಾವ ರೀತಿಯಲ್ಲಿ ಆ ಬಗ್ಗೆ ಆಕ್ಷೇಪಣೆ ಬಾರದೆ ಇದ್ದ ರೀತಿಯಲ್ಲಿ ಈ ಕೈಗಾರಿಕೆಯನ್ನು ಕರ್ನಾಟಕ ರಾಜ್ಯದಲ್ಲಿ ಉಜ್ಜ್ವಲವಾಗಿ ಬೆಳೆಸಲಿಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ, ಮಾನ್ಯ ಸದಸ್ಯರಿಗೆ ಈ ಬಗ್ಗೆ ಯಾವ ಒಂದು ಆತಂಕವೂ ಬಾರದೇ ಇದ್ದ ಹಾಗೆ ನೋಡಿಕೊಳ್ಳುತ್ತೇವೆಂದು ಈ ಸದನದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಂತ್ರಿಗಳು ಈ ವಿಚಾರದಲ್ಲಿ ಹೇಳಿದಂಥಾ ಮಾತನ್ನು ಬಹಳ ಕುತೂಹಲದಿಂದ ಕೇಳಿದ್ದೇನೆ. ಅವರು ಒಳ್ಳೆಯ ಜಾಣ ತನದಲ್ಲಿ ಉತ್ತರ ಕೊಟ್ಟಿದ್ದಾರೆ. ಏನೆಂದರೆ ಹಿಂದಿನ ಸರ್ಕಾರದ ಮೇಲೆ ಇದರ ಜವಾಬ್ದಾರಿಯನ್ನು ಹೊರಿಸಿ ಹಾಗೂ ಕನ್ನಡ ನೆಲ ಜಲದ ಮೇಲೆ ಇರತಕ್ಕಂಥ ಒಂದು ಅಭಿಮಾನದ ಮಾತಿನ ಬಗ್ಗೆ ಆಡಿಕೆ

ತಕ್ಕಂಥಾ ಮಾತನ್ನೂ ನಾನು ಕುತೂಹಲದಿಂದ ಕೇಳಿದ್ದೇನೆ. ನಾನು ಈ ವಿಚಾರದಲ್ಲಿ ಹೇಳಬೇಕಾದರೆ ಮಾನ್ಯ ವೀರಪ್ಪ ಮೊಯ್ಲಿಯವರ ಬಗ್ಗೆ ವೈಯುಕ್ತಿಕವಾಗಿ ಬೇರೆ ಕಾರಣ ಇರುವುದು ಅವರಿಗೆ ಗೊತ್ತಿದೆ. ಸರ್ಕಾರದವರನ್ನು ನಾನು ವಿಷ್ಯರ ಮಾಡಿಕೊಳ್ಳುವುದಕ್ಕೆ ಆಗಲಿ ಯಾವುದಕ್ಕೇ ಆಗಲಿ ಇಷ್ಟಪಡುವುದಿಲ್ಲ, ಆ ಬಗ್ಗೆ ನನ್ನ ಮನಸ್ಸೂ ಇಲ್ಲ. ಸರ್ಕಾರದ ಮೇಲಾಗಲಿ ಅಥವಾ ಇನ್ನೊಬ್ಬರ ಮೇಲಾಗಲಿ ಅವರ ಉತ್ತರ ನೋಡಿದರೆ ಅವರು ತಮ್ಮ ಜ್ಞಾನತನ ಅಂತ ತಿಳಿದುಕೊಂಡು ಏನು ಉತ್ತರ ಕೊಟ್ಟಿದ್ದಾರೋ ಆದಕ್ಕೆ ಪಸ್ನ ಉತ್ತರ ಅದರಂಥಾ ದೊಡ್ಡತನದ ಪರಮಾವಧಿ ಉತ್ತರ ಬೇರೊಂದಿಲ್ಲಾ. ಈ ಬಗ್ಗೆ ನಾನು ಹೇಳುವುದೇನೆಂದರೆ ಮಹಾಜನ್ ವರದಿ ಪ್ರಕಾರ, ಅದು ಕಾರ್ಯಗತವಾದರೆ ಆ ಪ್ರದೇಶ ಮಹಾರಾಷ್ಟ್ರಕ್ಕೆ ಹೋಗಬೇಕಾಗುತ್ತದೆ. ನಮ್ಮ ವಿರೋಧ ಕೈಗಾರಿಕೆಯ ವಿರುದ್ಧ ಅಲ್ಲ. ನಮ್ಮ ವಿರೋಧ ಶ್ರೀ ಗೋಗ್ಟೆಯವರ ವಿರುದ್ಧ ಅಲ್ಲ. ಈ ಒಂದು ಹಣ ನಮ್ಮ ವಿರುದ್ಧವಾಗಿರತಕ್ಕಂಥಾ ಗೋಗ್ಟೆಯವರಿಗಾಗಲಿ, ಮಹಾರಾಷ್ಟ್ರ ಪರವಾಗಿ ಆಗಲಿ ಇರಕೂಡದು ಎಂದು ಹೇಳುವುದಕ್ಕೆ ನಾನು ಹೋಗಿಲ್ಲ. ನಮ್ಮ ಕನ್ನಡಿಗರು ಹೇಳುವಂಥಾದ್ದು ಈ ಗೋಗ್ಟೆಯವರು ಮಹಾರಾಷ್ಟ್ರ ಪರವಾಗಿ ಇದ್ದರೆ, ಅವರು ನವ ಮನ್ನ ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಾರೆಯೇ ? ಈ ಕೈಗಾರಿಕೆ ಬೆಳಗಾಂನ ಒಂದು ಮೂಲೆಯಲ್ಲಿ ಇದೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ಸಮಸ್ಯೆಗಳು ಇವೆ ಈ ಮುಚ್ಚಿ ಗ್ರಾಮ ಕರ್ನಾಟಕದಲ್ಲಿ ಇರಬೇಕೇ, ಮಹಾರಾಷ್ಟ್ರದಲ್ಲಿ ಇರಬೇಕೇ ಅನ್ನುವ ಸಮಸ್ಯೆಯೂ ಇದೆ. ಅವರ ಅಭಿಪ್ರಾಯ ಈ ರೀತಿ ಇದೆ ಎಂದು ಹೇಳಿದ ಮಾತ್ರಕ್ಕೆ ಇದರ ಬಗ್ಗೆ ಹೋರಾಟದ ಪ್ರಶ್ನೆಯಾಗುವುದಿಲ್ಲ.

೪-೩೦ ಪಿ.ಎಂ.

ಈ ಬಗ್ಗೆ ಯಾವುದೇ ಒಂದು ಕಮಿಷನ್ ತೀರ್ಮಾನ ಮಾಡಿದರೂ ಅದು ಕೆಲವು ಅಭಿಪ್ರಾಯಗಳು ಆ ಕಡೆಗೆ ಮತ್ತು ಕೆಲವು ಅಭಿಪ್ರಾಯಗಳು ಈ ಕಡೆಗೆ ಆಗಲೇಬೇಕು. ಆದರೆ ಕರ್ನಾಟಕದ ಲಕ್ಷ್ಯವೆಲ್ಲಾ ಬೆಳಗಾವಿ ನಗರದ ಮೇಲೆ ಇರತಕ್ಕಂಥಾದ್ದಾಗಿದೆ. ಬೆಳಗಾವಿ ನಗರದ ಮೇಲೆ ಮಹಾರಾಷ್ಟ್ರದ ಪ್ರಭಾವ ಯುತ ಶಕ್ತಿಗಳ ಬೆಳವಣಿಗೆಗಳನ್ನು ತಡೆಯಬೇಕಾದುದು ನಮ್ಮ ಧರ್ಮ. ಈ ಬಟ್ಟೆ ಗಿರಣಿಯಿಂದ ಕರ್ನಾಟಕ ರಾಜ್ಯ ಏಳಿಗೆಯಾಗುವುದು ಅಥವಾ ಉದ್ಧಾರವಾಗುವುದು ಅಷ್ಟರಲ್ಲೇ ಇದೆ. ಅದು ಬೇರೆ ಪ್ರಶ್ನೆ. ಆ ಬಟ್ಟೆ ಗಿರಣಿಯನ್ನು ನಮ್ಮಲ್ಲಿ ಉಳಿಸಿಕೊಳ್ಳಬೇಕೆಂದು ಹೇಳಿ ಬೆಳಗಾಂನ್ನು ಆ ಕಡೆಗೆ ಕಳಿಸ ತಕ್ಕಂಥ ದೊಡ್ಡತನದ ಕೆಲಸವನ್ನು ಮಾಡುತ್ತಿದ್ದೀರಿ. ಇದು ಸರಿಯಲ್ಲ. ಇದರಲ್ಲಿ ಅವರು ನಮ್ಮ ಸರ್ಕಾರಕ್ಕೆ ಯಾವ ರೀತಿ ಮೋಸ ಮಾಡಿದ್ದಾರೆ ಏನ್ನುವುದು ನನಗೆ ಅರ್ಥವಾಗಿದೆ. ಇದರಲ್ಲಿ ಅಧಿಕಾರಿ ಗಳಿಂದ ಟಿಪ್ಪಣಿ ಹಾಕಿಸಿದ್ದಾರೆ. ಶ್ರೀ ಗೋಗಟೆಯವರಿಗೆ ಮಾಡೇ ಪಳ್ಳಿಯವರೆಗೆ ಜಾಗವನ್ನು ಕೊಟ್ಟು ಬಿಡುವುದು ದೊಡ್ಡತನದ ಕೆಲಸ. ನಾನು ಹೇಳುವುದೇನೆಂದರೆ ಬೆಳಗಾವಿ ನಮಗೆ ಬೇಕು, ಬೆಳಗಾವಿಯಲ್ಲಿ ಕನ್ನಡಿಗರ ಶಕ್ತಿಯನ್ನು ಉಳಿಸಿಕೊಳ್ಳತಕ್ಕಂಥ ಪ್ರಯತ್ನ ಮಾಡಬೇಕು ಮತ್ತು ಕನ್ನಡಿಗರ ಹಿತಕ್ಕೆ ವಿರುದ್ಧವಾಗಿರುವ ಶಕ್ತಿಗಳನ್ನು ತಡೆಗಟ್ಟಬೇಕು. ಇದು ಚಿಲ್ಲರೇ ಆಸ್ತಿಯ ವಿವಾದವೇನಲ್ಲ. ಬಟ್ಟೆ ಗಿರಣಿಯವರಿಗೆ ಸಬ್ಸಿಡಿ ಕೊಡಬಹುದು ಎಂದು ಹೇಳುವುದು ಸರಿಯಲ್ಲ. ನಿಮಗೆ ಗಿರಣಿ ಮುಖ್ಯವೋ ಅಥವಾ ಬೆಳಗಾಂ ಮುಖ್ಯವೋ ಎಂಬುದನ್ನು ವಿಚಾರ ಮಾಡಬೇಕು. ಬೆಳಗಾಂನಲ್ಲಿ ಗೋಗಟೆಯವರಿಗೆ ಈ ರೀತಿಯ ಒಂದು ಅವಕಾಶವನ್ನು ಒದಗಿಸಿಕೆ ಕೊಟ್ಟು ಅವರ ಚಕ್ರಾಧಿಪತ್ಯ ಸ್ಥಾಪನೆ ಮಾಡಿದರೆ ಬೆಳಗಾವಿ ನಗರದಲ್ಲಿರತಕ್ಕಂಥ ಮಹಾರಾಷ್ಟ್ರ ಪ್ರಭಾವೀಯುತ ಶಕ್ತಿಗಳಿಗೆ ಬಲವನ್ನು ಒದಗಿಸಿಕೊಟ್ಟಂತಾಗುತ್ತದೆ. ಆ ಬಟ್ಟೆ ಗಿರಣಿಗೆ ನೀವೇನು ಸ್ವಲ್ಪ ಹಣವನ್ನು ಬೆಚ್ಚಿ ಮಾಡಿದ್ದೀರಿ ಅದು ಹೋದರೆ ಹೋಗಲಿ ; ಆದರೆ ಮಹಾಜನ್ ಕಮಿಷನ್ ವರದಿ ಪ್ರಕಾರ ಅದು ನಮ್ಮ ಬಾರ್ಡರ್‌ನಲ್ಲಿ ಇದೆಯೆಂದು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ —ಈಗ ನಾವು ಕನ್ನಡಿಗರ ಹೇಡಿತನದ ಲಕ್ಷಣವನ್ನು ಪ್ರತಿಪಾದನೆ ಮಾಡುವುದು ಬೇಡ. ಮಹಾರಾಷ್ಟ್ರದ ಪ್ರಭಾವಯುತ ಶಕ್ತಿ ಅಲ್ಲಿ ಬೆಳೆಯುತ್ತಿದೆ ಎಂದು ಹೇಳಿದರೆ ಅದು ಸರಿಯಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ಸರಿಯಾದ ವಾದವಾಗುವುದಿಲ್ಲ. ಅಲ್ಲಿ ಇನ್ನೊಬ್ಬನಿಗೆ ಜಾಗ ಕೊಟ್ಟು, ಇದು ಕನ್ನಡಿಗರ ಹೇಡಿತನ ಎಂದು ಹೇಳುವುದರಲ್ಲಿ ಏನು ಅರ್ಥವಿದೆ ? ನೀವು ಹೇಳಿ ದ್ದೆಲ್ಲಾ ಅರ್ಗ್ಯುಮೆಂಟ್ ಆಗುವುದಿಲ್ಲ. ಅದಕ್ಕೆ ಒಂದು ಕ್ರಮ ಇದೆ. ಕನ್ನಡಿಗರ ಹಿತಕ್ಕೆ ಭಕ್ಕೆಯಾಗ ತಕ್ಕಂಥ ರೀತಿಯಲ್ಲಿ ಅಲ್ಲಿ ಮಹಾರಾಷ್ಟ್ರದ ಪ್ರಭಾವಯುತ ಶಕ್ತಿಗಳು ಬೆಳೆಯುವುದಕ್ಕೆ ಅವಕಾಶವಾಗು ತ್ತಿದೆ. ಈ ಮಾತನ್ನು ಹೇಳುವುದರಲ್ಲಿ ಯಾವ ಹೇಡಿತನವೂ ಇಲ್ಲ. ನಮ್ಮ ಕೈಯನ್ನು ಕಟ್ಟಿ ಕೂರಿಸಿ

ಇನ್ನೊಬ್ಬನ ಕೈಯಲ್ಲಿ ಚಾಕು ಕೊಟ್ಟರೆ ಅದರಿಂದ ಅಪಾಯ ತಪ್ಪಿದ್ದಲ್ಲ ಎಂದು ಹೇಳುವುದರಲ್ಲಿ ಯಾವ ಹೆ ಆತಂಕವೂ ಪ್ರಶ್ನೆಯೂ ಇಲ್ಲ ಹಿಂದಿನ ಸರ್ಕಾರದವರು ಮಾಡೋ ಪಳ್ಳಿಯಲ್ಲಿ ಅವರಿಗೆ ಜಾಗ ಕೊಟ್ಟಿದ್ದರಲ್ಲಿ ಹಿಂರಕ್ಷಣೆಯ ಪ್ರಶ್ನೆ ಇರಲಿ ಅಥವಾ ಬಿಡಲಿ ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಈಗ ನೀವು ಮಾಡಹತ್ತಿರತಕ್ಕಂಥ ಕೆಲಸದಿಂದ ಬೆಳಗಾವಿ ಕನ್ನಡಿಗರ ಹಿತರಕ್ಷಣೆಗೆ ಧಕ್ಕೆಯಾಗ ತಕ್ಕಂಥ ಪರಿಸ್ಥಿತಿ ತಪ್ಪಿದ್ದಲ್ಲ ಅದನ್ನು ನೀವು ತೆಗೆದುಹಾಕಿದ್ದರೆ ನಾವು ಸಹಾಯಗಿರಿ ಕೊಡಬಹುದಾಗಿತ್ತು ನೀವು ಏನು ಗಿರಣಿಯ ಆಲೆಗೋಸ್ಕರ ಇಡೀ ಬೆಳಗಾವಿ ನಗರವನ್ನೇ ಅಪಾಯದ ಸ್ಥಿತಿಗೆ ತಂದಿರತಕ್ಕಂಥಾದ್ದು ಸರಿಯಲ್ಲ. ಬೆಳಗಾವಿ ಕನ್ನಡಿಗರ ಹಿತರಕ್ಷಣೆ ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ ಹಾಗೂ ನೈತಿಕ ಹಕ್ಕು ಇದೆ. ಯಾರೂ ನಮ್ಮ ನೈತಿಕ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಮಾಡಿರತಕ್ಕಂಥಾದ್ದು ದಡ್ಡತನದ ಕೆಲಸ ಹಾಗೂ ಕರ್ನಾಟಕದ ಹಿತಕ್ಕೆ ವಿರುದ್ಧವಾಗಿರತಕ್ಕಂಥ ಕೆಲಸ, ಬೆಳಗಾವಿ ಭವಿಷ್ಯಕ್ಕೆ ಧಕ್ಕೆ ತರತಕ್ಕಂಥ ಕೆಲಸ ಎಂದು ನಾನು ಹೇಳಿಬಿಡುವುದಕ್ಕೆ ಬಯಸುತ್ತೇನೆ. With all emphasis at my command I want to tell the Government. if anything else remains in the hands of the Government to prevent this happening, please take steps immediately to prevent it so that posterity may not accuse us for having committed this colossal blunder.

† ಶ್ರೀ ಜಿ. ಕೆ ತಕ್ಕೇದ್ —ಮಾನ್ಯ ಅಧ್ಯಕ್ಷರೇ ಬೆಳಗಾವಿ ನಗರದಲ್ಲಿ ಮತ್ತು ಬೆಳಗಾವಿಯ ಸುತ್ತ ಮುತ್ತಲ ಪ್ರದೇಶದಲ್ಲಿ ಶ್ರೀ ಮಾನ್ ಗೋಗಟೆಯವರು ಟೆಕ್ಸ್‌ಟೈಲ್ ಮಿಲ್ ಮತ್ತು ಸ್ಪಿನ್ನಿಂಗ್ ಮಿಲ್ಲನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಏನೊಂದು ಮಾರ್ಗಣೆಯನ್ನು ಕೊಟ್ಟಿದ್ದಾರೆಯೋ ಆ ಬಗ್ಗೆ ಇವತ್ತಿನ ಸರ್ಕಾರದವರ ಹೇಳಿಕೆಯನ್ನು ನೋಡಿ ನನಗೆ ಬಹಳ ವಿಷಾದವಾಗುತ್ತಿದೆ ಹಾಗೂ ದುಃಖವಾಗುತ್ತಿದೆ. ನಾನು ಈವರೆಗೆ ಸುಮಾರು ವರ್ಷದಿಂದ ಕನ್ನಡಿಗರ ಚಳುವಳಿ ಹೋರಾಟಗಾರರಲ್ಲಿ ಒಬ್ಬನಾಗಿ ಕೆಲಸ ಮಾಡುತ್ತಿದ್ದೇನೆ. ಬೆಳಗಾವಿ ನಗರವನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳುವ ಸಲುವಾಗಿ ಬೆಳಗಾವಿಯ ಸುಮಾರು ಕನ್ನಡಿಗರು ಅಷ್ಟೇ ಅಲ್ಲ ಸಮಸ್ತ ಕರ್ನಾಟಕದ ಕನ್ನಡಿಗರು ಅದಕ್ಕಾಗಿ ಬಹಳ ಹೋರಾಟವನ್ನು ಮಾಡಿದ್ದಾರೆ. ಆದರೆ ಅವರಲ್ಲಿ ಯಾವ ಪಕ್ಷಪಾತಗಡಗಳನ್ನು ಇಟ್ಟುಕೊಳ್ಳದೇ ಹೋರಾಟ ಮಾಡಿ ಬೆಳಗಾವಿ ನಗರವನ್ನು ಕರ್ನಾಟಕದಲ್ಲಿ ಇಟ್ಟುಕೊಂಡಿದ್ದಾರೆ. ಇವತ್ತಿನ ಈ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿ ನಾನು ಹೇಳುತ್ತಿದ್ದೇನೆ, ಈ ಬೆಳಗಾವಿ ನಗರದ ಪ್ರಶ್ನೆ ಇನ್ನೂ ಮುಗಿದಿಲ್ಲ. ಆದರೂ ಮಹಾರಾಷ್ಟ್ರ ಅಸೆಂಬ್ಲಿಯಲ್ಲಿ ಶ್ರೀ ಅಂತುಲೆಯವರು ಈ ಪ್ರಶ್ನೆ ಮುಗಿದಿದೆ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ.....

ಶ್ರೀ ಕೆ ಎಚ್. ಶ್ರೀನಿವಾಸ್. —ಇದು ಗಡಿ ಪ್ರಶ್ನೆಯೇ ಹೊರತು, ಪಕ್ಷಪಾತಗಡಗಳ ಪ್ರಶ್ನೆಯಲ್ಲ. ಈ ಗಡಿ ಪ್ರಶ್ನೆಯ ಸಂಬಂಧದಲ್ಲಿ ಇದನ್ನು ನ್ಯಾಯ ರೀತಿಯಲ್ಲಿ, ನಮಗೆ ಬೆಳಗಾವಿ ಸಿಕ್ಕಬೇಕು ಎನ್ನುವ ತಕ್ಕಂಥ ರೀತಿಯಲ್ಲಿ ವ್ಯವಹಾರ ನಡೆಸಬೇಕು ಎನ್ನುವ ಅಭಿಲಾಷೆ ಸರ್ಕಾರಕ್ಕೆ ಇದ್ದರೆ ಈ ಬಗ್ಗೆ ಮುಕ್ತ ಚರ್ಚೆಗೆ ಅವಕಾಶ ಕೊಡಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ,

ಚೇರ್‌ಮನ್.—ಮಾನ್ಯ ತಕ್ಕೇದರವರೇ, ನಿಮ್ಮ ಭಾಷಣವನ್ನು ಸ್ವಲ್ಪ ಸಂಕ್ಷಿಪ್ತವಾಗಿ ಹೇಳಿ ಮುಗಿಸಿ.

ಶ್ರೀ ಜಿ. ಕೆ. ತಕ್ಕೇದ್.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ವಿಚಾರದಲ್ಲಿ ಇಲ್ಲಿ ಹೇಳಿರತಕ್ಕಂಥ ನೂತನ ಕಾನ್ಸ್ಟಿಟ್ಯೂಷನ್ನು ಕೊಡಿರಲಿ ಅಧಿಕಾರಿಗಳು ಈ ವಿಷಯದಲ್ಲಿ ಸರ್ಕಾರಕ್ಕೆ ತಪ್ಪು ಮಾಹಿತಿಯನ್ನು ಒದಗಿಸಿದ್ದಾರೆ ಎಂದು ನನಗನ್ನಿಸುತ್ತದೆ. ಈ ವಿಚಾರದಲ್ಲಿ ಅವರು ಸಂಪೂರ್ಣವಾಗಿ ಸರ್ಕಾರಕ್ಕೆ ತಪ್ಪು ವರದಿಯನ್ನು ಕೊಟ್ಟಿದ್ದಾರೆ. ಇವತ್ತು ನೂರಕ್ಕೆ ನೂರು ಪಾಲು ಬೆಳಗಾವಿ ಕನ್ನಡಿಗರ ಜೀವನವನ್ನು ತಲ್ಲಿಗೆಳೆಯುವಂಥ ವಾತಾವರಣ ಇದರಲ್ಲಿದೆ. ಮಹಾಜನ್ ಕಮಿಷನ್‌ನವರಾಗಲೀ ಅಥವಾ ಮತ್ತೊಂದು ಕಮಿಷನ್ ಸರ್ಕಾರಾಗಲೀ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಲಿ ಎಂದು ಎಲ್ಲೂ ಹೇಳಿಲ್ಲ. ಆಥವಾ ಇಲ್ಲಿ ಮಹಾರಾಷ್ಟ್ರ ಪರವಾಗಿ ಅನೆಕ ಇಂದ್ಯುಸ್ ಮಾಡುವುದಕ್ಕೆ ಅವಕಾಶ ಕೂಡಿ ಎಂತಲೂ ಕೂಡ ಹೇಳಿಲ್ಲ. ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಜಿಲ್ಲೆಯ ೧೨ ಶಾಸಕರು, ಯಾವುದೇ ಪಕ್ಷಕ್ಕೆ ಸೇರಿರಲಿ ನಾವೆಲ್ಲಾ ಕನ್ನಡಿಗರು, ನಾವೆಲ್ಲಾ ಒಂದೇ ಜಾತಿಯವರು ಎಂದು ತಿಳಿದುಕೊಂಡು ಈ ವಿಚಾರದಲ್ಲಿ ಶ್ರೀ ಗೋಗಟೆಯವರಿಗೆ ಕೊಟ್ಟಿರುವ ಮಾರ್ಗಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಿರಿ ಎಂದು ನಾವು

ಸರ್ಕಾರದವರಲ್ಲಿ ಕೇಳಿಕೊಂಡಿದ್ದೇವೆ. ಏಕೆಂದರೆ ನಮ್ಮ ನೋವು ನಮಗೆ ಗೊತ್ತು. ಶ್ರೀಮಾನ್ ವೀರಪ್ಪ ಮೊಯಿಲಿಯವರು ಅದು ಹುಲ್ಲು ಕಡ್ಡಿಯೂ ಬೆಳೆಯದಂಥ ಪ್ರದೇಶ ಎಂದು ಹೇಳಿದರು. ತಾವು ಬಂದು ನೋಡಿ, ಅಲ್ಲಿ ಉತ್ಕೃಷ್ಟವಾದ ಫಾರೆಸ್ಟ್ ಇವತ್ತು ಅಲ್ಲಿ ಬರುತ್ತಾ ಇದೆ. ಅಲ್ಲಿ ೬೦ ಅಂಗುಲ ಮಳೆಯಾಗುತ್ತಿದೆ. ಇವತ್ತಿನ ದಿವಸ ಅಲ್ಲಿ ೪ ಎಕರೆಯಿಂದ ೧೦ ಎಕರೆಯಷ್ಟು ಪ್ರದೇಶದಲ್ಲಿ ಟೆಕ್ಸ್‌ಟೈಲ್ ಮಿಲ್ ಬರುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಒಟ್ಟು ೧೫ ಟೈಕ್ಸ್‌ಟೈಲ್ ಮಿಲ್ ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಮಂಜೂರಾತಿ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಅಧಿಕಾರಿಗಳು ಕನ್ನಡಿಗರ ಹಿತವನ್ನು ಸಂಪೂರ್ಣವಾಗಿ ನಿರಾಕರಣೆ ಮಾಡಿ ಸರ್ಕಾರಕ್ಕೆ ಈ ರೀತಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಹಿಂದಿನ ಸರ್ಕಾರ ತಪ್ಪು ಮಾಡಿದೆ ಎ ತ್ತು ಹಿಂದಿನ ಸರ್ಕಾರ ಕೂಡ ತಪ್ಪು ಮಾಡಿದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನೀವು ಮಾಡಿದ್ದಲ್ಲ, ನಿಮ್ಮ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಇನ್ನು ಮೇಲಾದರೂ ನೀವು ಹುಷಾರಾಗಿರಿ ಎಂದು ನಾನು ಹೇಳುತ್ತಿದ್ದೇನೆ. ನಾನು ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ಶ್ರೀ ಗೋಗಟೆಯವರಿಗೆ ಕೊಟ್ಟಿರತಕ್ಕಂಥ ಮನ್ನಣೆಯನ್ನು ಪುನರ್ ವಿಮರ್ಶೆ ಮಾಡಿ. ನಮ್ಮ ಬೆಳಗಾವಿ ಜಿಲ್ಲೆಯ ವತಿಯಿಂದ, ಎಲ್ಲಾ ಕನ್ನಡಿಗರ ವತಿಯಿಂದ ನಾನು ಪದೇ ಪದೇ ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರದವರು ಈ ಅಭಿಪ್ರಾಯದಲ್ಲಿ ಪುನರ್ ವಿಮರ್ಶೆ ಮಾಡಬೇಕು. ಕೇವಲ ಇದನ್ನು ಒಂದು ಪಕ್ಷದ ದೃಷ್ಟಿಯಿಂದ ತೆಗೆದ ಕೊಳ್ಳಬೇಡಿರಿ ಇದೀ ಕರ್ನಾಟಕದ ಕನ್ನಡಿಗರ ಹಿತದೃಷ್ಟಿಯಿಂದ ಇದನ್ನು ತೆಗೆದುಕೊಳ್ಳಿರಿ. ಈ ಒಂದು ಸಮಸ್ಯೆಗೆ ಇನ್ನೂ ಪೂರ್ಣ ವಿರಾಮ ಬಿದ್ದಿಲ್ಲ. ನಾವು ನಮ್ಮ ಮುಂದಿನ ಭವಿಷ್ಯವನ್ನು ಕೂಡ ನೋಡಬೇಕಾಗುತ್ತದೆ. ಏತಕ್ಕೆಂದರೆ ಮುಂದೆ ಬರುವ ನಮ್ಮ ಪೀಳಿಗೆ ನಮ್ಮ ಮಕ್ಕಳು ಇದನ್ನು ಅನುಭವಿಸ ಬೇಕಾಗುತ್ತದೆ. ಕನ್ನಡದ ಅಭಿಮಾನ ಸ್ವಲ್ಪ ಜನಗಳಲ್ಲಿ ಸ್ವತ್ತು ಆಗಬಾರದು, ಏತಕ್ಕೆಂದರೆ ನಾನು ಈ ಮಾತನ್ನು ಹೇಳದೆ ಹೋದರೆ ನಾನು ನನ್ನ ಕರ್ತವ್ಯಕ್ಕೆ ಚ್ಯುತಿ ಮಾಡಿದ ಹಾಗೆ ಆಗುತ್ತದೆ. ನಾನು ಶಾಸನ ಸಭೆಯಲ್ಲಿ ಈ ಮಾತನ್ನು ಹೇಳಲಿಲ್ಲ ಎನ್ನುವ ಆಪಾದನೆ ಬರಬಾರದು. ಆದಕ್ಕಾಗಿ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಅದುದರಿಂದ ಆ ಭೂಮಿಯನ್ನು ಗೋಗಟೆಯವರಿಗೆ ಕೊಟ್ಟಿದ್ದೆ ಆದರೆ ಕನ್ನಡ ಕುಲಕೋಟಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಬೆಳಗಾಂ ನಗರ ಏನಿದೆ ಅದು ಯಾವತ್ತೂ ಕನ್ನಡಿಗರದು. ಕರ್ನಾಟಕ್ಕೆ ಸೇರಿದ್ದು ಆದ್ದರಿಂದ ಬೆಳಗಾವಿ ನಗರದ ಕನ್ನಡಿಗರ ಭಾವನೆಗೆ ಮನ್ನಣೆಯನ್ನು ಕೊಟ್ಟು ಇದರ ಬಗ್ಗೆ ಸರ್ಕಾರದವರು ಪುರ್ಯಾಲೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರ ರಚನಾತ್ಮಕವಾಗಿ ಕಾನೂನು ಬದ್ಧವಾಗಿ ಸರಿ ಇದ್ದರೂ ಕೂಡ ಕನ್ನಡಿಗರ ಹಿತದೃಷ್ಟಿಯಿಂದ ಸರಿಯಲ್ಲ ಇದನ್ನು ಪುನರ್ ವಿಮರ್ಶೆ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

CHAIRMAN.—We will go to the next item on the agenda.

SRI P. RAMDEV.—Sir, I wish to ask one clarification.

CHAIRMAN.—To-day, we have to complete the Supplementary Demands. Tomorrow we have to take up general discussion on the Budget. The subject has been discussed sufficiently under Rule 312. There is no scope to have a further substantial debate over this subject.

ಶ್ರೀ ಮಲ್ಲಾರಿಗೌಡ ಪಾಟೀಲ್.—ಇದು ಬಹಳ ಮಹತ್ವವಾದ ಪ್ರಶ್ನೆ. ಮಹಾಜನ್ ವರದಿಯ ಪ್ರಕಾರ ಬೆಳಗಾಂ ನಗರ ಕನ್ನಡಿಗರದು ಕರ್ನಾಟಕಕ್ಕೆ ಸೇರಬೇಕಾದುದು. ಈ ದೃಷ್ಟಿಯಿಂದ ಶ್ರೀಮಾನ್ ಗೋಗಟೆಯವರಿಗೆ ಏನು ನಿವೇಶನವನ್ನು ಕೊಡಬೇಕೆಂದು ಇದ್ದಾರೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕು. ಇಲ್ಲದೆ ಹೋದರೆ ನಮ್ಮ ಕರ್ನಾಟಕದಲ್ಲಿರತಕ್ಕ ಗ್ರಾಮ ಹೊನಗೆ ಮಹಾರಾಷ್ಟ್ರಕ್ಕೆ ಹೋಗುತ್ತದೆ.

CHAIRMAN.—The scope under Rule 312 is very limited. We have discussed this issue sufficiently. Kindly bring a substantial motion

land have a discussion on the floor of the House. I will not come in your way. Therefore, now we will go to the next item on the Agenda.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯ್ಲಿಯವರಲ್ಲಿ ಒಂದು ವಿಷಯವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ ಈ ಒಂದು ವಿಷಯದ ಬಗ್ಗೆ ಎರಡು ಕಡೆಯ ಮಾನ್ಯ ಸದಸ್ಯರಿಗೆ ಇದರ ವಿಚಾರ ಚೆನ್ನಾಗಿ ಗೊತ್ತಿದೆ. ಶ್ರೀಮಾನ್ ಗೋಗಟೆಯವರಿಗೆ ಪರವಾನಿಗೆ ಕೊಟ್ಟಿರುವ ವಿಷಯದಲ್ಲಿ ಎಲ್ಲರೂ ಕೂಡ ಆಕ್ಷೇಪಣೆಯನ್ನು ಎತ್ತಿದ್ದಾರೆ. ಇದರ ಬಗ್ಗೆ ಹೆಚ್ಚು ವಾದ ಬೇಡ. ಈಗ ಏನು ಶ್ರೀಮಾನ್ ಗೋಗಟೆಯವರಿಗೆ ಲೈಸನ್ಸ್ ಕೊಟ್ಟಿದ್ದಾರೆ ಅದನ್ನು ವಿತ್ ಡ್ರಾ ಮಾಡಬೇಕು. ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡೋಣ. ಆದ್ದರಿಂದ ಇದರ ಬಗ್ಗೆ ಯಾವುದೇ ಕೆಲಸವನ್ನು ಮುಂದುವರಿಸಿಕೊಂಡು ಹೋಗದೆ ತಡೆಯಬೇಕು ಮುಂದೆ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ ಮಾನ್ಯ ಸದಸ್ಯರಾದ ತಕ್ಕೇದ್ ಅವರು ಹೇಳಿದ ವಿಚಾರ ಹೊಸದಾಗಿ ಬಂದಿದ್ದು ಏನು ಅಲ್ಲ. The licence was issued about two years back ಈಗ ಇದರ ಬಗ್ಗೆ ಮಾನ್ಯ ಸದಸ್ಯರಾದ ತಕ್ಕೇಡ್ ಅವರು ಒಮ್ಮೆಲೆ ಉದ್ವೇಗದಿಂದ ಮಾತನಾಡುವ ಅವಶ್ಯಕತೆ ಇಲ್ಲ. ಕನ್ನಡಿಗರು ಬೆಳೆಯಬೇಕು ಕನ್ನಡ ರಾಜ್ಯ ಬೆಳೆಯಬೇಕಾಗಿದೆ. ಎನ್ನುವ ಬಗ್ಗೆ ಸರ್ಕಾರಕ್ಕೆ ಅದಷ್ಟು ಕಾಳಜಿ ಇದೆ. As far as, following the procedure of this land grant etc. is concerned, the government has always got the interests of the State uppermost in its mind. ಈಗಾಗಲಿ ಇನ್ನು ಮುಂದೆಯಾಗಲಿ ನಮ್ಮ ಸರ್ಕಾರ ಕರ್ನಾಟಕ ರಾಜ್ಯದ ಹಿತಾಶಕ್ತಿಯನ್ನು ಉಳಿಸಿಕೊಳ್ಳುವುದರಲ್ಲಿ ಯಾರಿಗೂ ಯಾವ ಅನುಮಾನ ಬೇಕಾಗಿಲ್ಲ.

ಶ್ರೀ ಪಿ. ರಾಮದೇವ್.—ಸ್ವಾಮಿ ನಾನೊಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಶ್ರೀಮಾನ್ ಗೋಗಟೆಯವರಿಗೆ ಆಗರಚೆಯನ್ನು ಸ್ಥಾಪಿಸುವುದಕ್ಕೆ ಲೈಸನ್ಸ್ ಕೊಡುವುದಾದರೆ ಕರ್ನಾಟಕಕ್ಕೆ ಸೇರಿರುವ ಪ್ರದೇಶ ಮಹಾರಾಷ್ಟ್ರಕ್ಕೆ ಹೋಗುತ್ತದೆ ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ನಾನು ಮಾನ್ಯ ಮಂತ್ರಿಗಳನ್ನು ಒಂದೆರಡು ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಮಿನಿನೇ ಸಿಯಮದ ಪ್ರಕಾರ ಮಂತ್ರಿಗಳ ಸ್ಟೇಟ್‌ಮೆಂಟ್ ಆದ ಮೇಲೆ ಆದರಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶವನ್ನು ಮಾನ್ಯ ಸದಸ್ಯರಿಗೆ ಈಗ ಮೂರು ವರ್ಷಗಳಿಂದ ಕೊಟ್ಟುಕೊಂಡು ಬಂದಿದ್ದಾರೆ. ಹೀಗಿರುವಾಗ ನಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಲಿಲ್ಲ ಎಂದರೆ ಇದು ದುರದೃಷ್ಟಕರ ಎಂದು ಹೇಳಬಹುದು. According to Mahajan Commission award, Honage village goes to Maharastra.

CHAIRMAN.—I will go to the next item. Discussion and voting of Supplementary Demands.

SRI M. VEERAPPA MOILY.—Sir, I have already moved...

SRI P. RAMDEV.—Sir, I rise to a point of order. Under Rule 312...

CHAIRMAN.—I am sorry. Please resume your seat. The Rule 312 says.

> "A member who wishes to bring to the notice of the Assembly any matter which is not a Point of Order shall give notice to the Secretary in writing stating briefly the point which he wishes to raise in the Assembly together with reasons for wishing to raise it and he shall be permi-

tted to raise it only after the Speaker has given his ct and at such time and date as the Speaker may fix."

SRI P. RAMDEV.—I have sent a motion under 312 My point of order is that the Members who raise the issue under 312 are allowed to make a statement. then the Minister will reply and lastly the members are allowed to ask clarifications. That has been the tradition in this House.

CHAIRMAN.— Please read the Rule 312

SRI P. RAMDEV.—I know that Rule 312. But, what is the entiou .

CHAIRMAN.—Convention is only in the absence of Rule.

SRI P. RAMDEV.—How other hon. Members are allowed to ask clarifications contrary to the Rule ? I humbly submit that rules have been violated in the House. Sir, according to Mahajan Commission Honage village goes to Maharashtra.

CHAIRMAN.—There is no point of order.

SRI P. RAMDEV.—The Chair is setting out a bad precedent. In protest, I am staging a walk out.

(Hon Membe Sri P. Ramdev withdrew from the House)

FINANCIAL BUISINESS

SUPPLEMENTARY DEMAND FOR GRANTS FOR DURING 1980—81

SRI M. VEERAPPA MOILY (Minister for Finance.)—Sir, on the recommendation of the Governor I beg to move :—

That a further sum not exceeding Rs. 3,000 under Revenue and Rs. 223,33,000 under Capital be granted to Government to defray the charges which will come in course of payment during the year ending the 31st day of March, 1981, in respect of "Agriculture (excluding Horticulture and Drought Prone Areas Programme)"

That a further sum not exceeding Rs. 1,000 under Revenue be granted to Government to defray the charges which will come in course of payment during the year ending the 31st day of March, 1981. in respect of "Horticulture"

That a sum not exceeding Rs. 1,50,00,000 under Revenue be granted to Government to defray the charges which will come in course of payment during the year ending the 31st day of March, 1981, in respect of "Soil and Water Conservation."